SRI QAMARUL ISLAM.—I have given a question in 1978 and it was renewed for all Sessions in four years and I am sorry to say that still I have not got any reply. That is regarding reservation for minorities in Government Service in Classes I to IV. I would like to know how long it will take to get the details. I also request Mr. Speaker to direct the Government to reply the question and that question be included in this Session at least.

MR. SPEAKER.—I have been doing that.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ನಾನು ಬೀದರ್ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದೆ. ಅದು ಇದುವರೆವಿಗೂ ಬರಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬಹಳ ವರ್ಷಗಳಿಂದ ಈ ಮನೆಯ ಸದಸ್ಯರಾಗಿದ್ದಾರೆ. ಮುಂದಿನ ಕಾರ್ಯಕ್ರಮಕ್ಕೆ ಪ್ರೈವೇಟ್ ಮೆಂಬರ್ಸ್ ಬಿಲ್ಸ್ ಅಂಡ್ ರೆಜಲ್ಯೂಶನ್ ಕಮಿಟಿ ರಿಪೋರ್ಟ್ ಈಗಾಗಲೇ ಈ ಸಭೆಯ ಮುಂದೆ ಇದೆ. ಆ ವಿಷಯದ ಬಗ್ಗೆ ಮಾನ್ಯ ಸದಸ್ಯರು ಯಾರಾದರೂ ಮಾತನಾಡುವವರಿದ್ದರೆ ಅವರು ಮಾತನಾಡಬಹುದು.

Non-official Business

Re.—Non-Official Resolution—Providing free medical Treatment to all citizens of the State (Contd.)

೯-೩೦ ಎ.ಎಂ

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಘನಾಧ್ಯಕ್ಷರೆ, ಮಾನ್ಯ ಮಿತ್ರರಾದ ರಾಂದೇವ್ ರವರು ರಾಜ್ಯದಲ್ಲಿರತಕ್ಕ ಎಲ್ಲರಿಗೂ ಉಚಿತ ವೈದ್ಯಕೀಯ ಸಲಹೆ, ಉಚಿತ ವೈದ್ಯಕೀಯ ಉಪಚಾರವನ್ನು ನೀಡಬೇಕೆಂಬ ನಿರ್ಣಯವನ್ನು ತಂದಿದ್ದಾರೆ. ಇದು ಸ್ವಾಗತಾರ್ಹವಾದಂಥಾದ್ದು. ಸರ್ಕಾರದ ಪ್ರಮುಖವಾದ ಜವಾಬ್ದಾರಿ ಎಂದರೆ, ವಿದ್ಯೆ, ಆರೋಗ್ಯ, ಭಾಗ್ಯ—ಇವುಗಳನ್ನು ಕರುಣಿಸತಕ್ಕ ಜವಾಬ್ದಾರಿ ಸಂಪೂರ್ಣವಾಗಿ ಸರ್ಕಾರದ ಮೇಲಿದೆ. ಆದರೆ ಇವತ್ತಿನ ಪರಿಸ್ಥಿತಿಯನ್ನು ವಿಚಾರಮಾಡಿದಾಗ ನಮ್ಮಲ್ಲಿ ಸಾಕಷ್ಟು ವೈದ್ಯಕೀಯ ಸೌಲಭ್ಯಗಳಿಲ್ಲ. ನಮ್ಮಲ್ಲಿ ಪರಿಣತರಾದಂಥ ವೈದ್ಯರು ಇದ್ದಾರೆ. ಆದರೆ ಇರತಕ್ಕಂಥ ವೈದ್ಯರಲ್ಲಿ ಶಿಕ್ಷಣ, ಪದವಿ ಪಡೆದವರು ನಮ್ಮ ದೇಶದ ದೀನದಲಿತ ಜನಕ್ಕೆ ಸಹಾಯ ಮಾಡುವುದಕ್ಕೆ ಬದಲಾಗಿ ತಮ್ಮ ಜೀವನೋಪಾಯಕ್ಕೆ ದೇಶವಿದೇಶಗಳಿಗೆ ಹೋಗತಕ್ಕಂಥ ಪರಿಸ್ಥಿತಿಯನ್ನು ಇಂದು ನಾವು ಕಾಣುತ್ತಾ ಇದ್ದೇವೆ. ಕರ್ನಾಟಕ ರಾಜ್ಯದಲ್ಲಿ ಸಹಸ್ರಾರು ಜನ ವೈದ್ಯರು ಇದ್ದಾರೆ. ಇವರ ನಮ್ಮ ದೇಶದಲ್ಲಿ ಸೇವೆ ಮಾಡತಕ್ಕ ಪರಿಸ್ಥಿತಿಯನ್ನು ಮರೆತು ಬೇರೆ ದೇಶಕ್ಕೆ ಹೋಗುತ್ತಾ ಇದ್ದಾರೆ. ಇದಕ್ಕೆ ಕಾರಣ ಯಾರು—ವೈದ್ಯಕೀಯ ಶಿಕ್ಷಣ ಪಡೆದಿದ್ದಾರೋ, ತಜ್ಞರಾಗಿದ್ದಾರೋ, ಪದವಿ ಪಡೆದಿದ್ದಾರೋ ಅಂತಹ ಜನಕ್ಕೆ ಸಿಗಬೇಕಾದಂಥ ಅವಕಾಶಗಳನ್ನು ಸೇವೆ ಮಾಡತಕ್ಕ ಅವಕಾಶಗಳನ್ನು ಕಲ್ಪನೆ ಮಾಡಿ ಕೊಡದೆ ಇರತಕ್ಕಂಥಾದ್ದು ಕಾರಣವಾಗಿದೆ. ಈ ದೇಶದಲ್ಲಿರತಕ್ಕ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ವೈದ್ಯಕೀಯ ಸೌಲಭ್ಯ ಸಿಗತಕ್ಕಂಥಾದ್ದು ಅತ್ಯಂತ ದುರ್ಲಭ. ಈ ದೇಶದಲ್ಲಿರತಕ್ಕ ೨೬ ಸಾವಿರ ಹಳ್ಳಿಗಳಲ್ಲಿ ೧೦ ಸಾವಿರ ಹಳ್ಳಿಗಳಿಗೆ ಇನ್ನೂ ವೈದ್ಯರ ಪ್ರವೇಶವೇ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಅದರಲ್ಲೂ ಸಣ್ಣಪುಟ್ಟ ಗುಡಿಸಲುಗಳಲ್ಲಿ ಜನ ವಾಸ ಮಾಡತಕ್ಕ ಕಡೆ ವೈದ್ಯರಂ ಹೋಗತಕ್ಕ ಪರಿಸ್ಥಿತಿಯಿಲ್ಲದೆ, ಸಣ್ಣಪುಟ್ಟ ಗುಡಿಸಲುಗಳಲ್ಲಿ ವಾಸಮಾಡತಕ್ಕ ದೀನದಲಿತ ಜನ ಅನೌಪಚಾರಿಕವಾಗಿ ಅಂಧಶ್ರದ್ಧೆಯಿಂದ ದೇವೀ ದೇವತೆಗಳನ್ನು ಮೊರೆಹೋಗತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಇದಕ್ಕೆ ಕಾರಣ ವ್ಯವಸ್ಥಿತವಾದ ವೈದ್ಯಕೀಯ ಸೌಲಭ್ಯ ಎಲ್ಲರಿಗೂ ಮುಟ್ಟುವ ಪರಿಸ್ಥಿತಿಯಿಲ್ಲದೇ ಇರತಕ್ಕಂಥಾದ್ದು. ಇವತ್ತು ವೈದ್ಯಕೀಯ ಸೌಲಭ್ಯಗಳು ಶ್ರೀಮಂತ

ವಾಗಿವೆ. ಮತ್ತು ಶ್ರೀಮಂತರಿಗೆ ಲಭ್ಯವಾಗುವ ಪರಿಸ್ಥಿತಿಯಿದೆ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಇರತಕ್ಕ ವೈದ್ಯಕೀಯ ಸಂಸ್ಥೆಗಳಲ್ಲಿ ಸಾಮಾನ್ಯ ಜನರಿಗೆ ಕೊಡತಕ್ಕ ಔಷಧೋಪಚಾರ ಬಹಳ ಅಗಣ್ಯವಾಗಿದೆ ಮತ್ತು ಶೋಚನೀಯವಾಗಿದೆ. ವೈದ್ಯರೂ ಕೂಡ ಇವರು ಪೋರ್ಟ್‌ಫೋಲಿಯೊ ಹಂಚಿಕೊಂಡಹಾಗೆ, ಕಷ್ಟದಲ್ಲಿರತಕ್ಕ ಜನ ಬಂದರೆ, ಸಂಬಂಧಪಟ್ಟವರು ಇಲ್ಲದೇಹೋದರೆ, ಇನ್ನೊಬ್ಬ ವೈದ್ಯರು ಪರೀಕ್ಷೆ ಮಾಡುವುದಿಲ್ಲ. ನೋಡುವುದಿಲ್ಲ, ಹೀಗಾಗಿ ಅವರುಗಳು ಸಲಹೆ ಕೊಡತಕ್ಕ ಅವಕಾಶವನ್ನು ಕಳೆದುಕೊಂಡಿದ್ದಾರೆ. ಈ ದೇಶದಲ್ಲಿ ತಜ್ಞ ವೈದ್ಯರಿಗೆ ಕೊರತೆಯಿಲ್ಲ, ಔಷಧಗಳ ಉತ್ಪನ್ನಕ್ಕೆ ಕೊರತೆಯಿಲ್ಲ. ಸಾಕಷ್ಟು ಔಷಧಿಗಳು ಉತ್ಪನ್ನವಾಗುತ್ತಾ ಇವೆ. ಔಷಧಿಗಳನ್ನು ಉತ್ಪನ್ನ ಮಾಡತಕ್ಕ ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಇವೆ. ಆದರೆ ಸುಲಭ ದರದಲ್ಲಿ ಸಾಮಾನ್ಯ ಜನರಿಗೆ ಔಷಧೋಪಚಾರ ದೊರೆಯುತಕ್ಕ ವ್ಯವಸ್ಥೆ ಈ ದೇಶದಲ್ಲಿ ಆಗಿಲ್ಲ.

ಅಧ್ಯಕ್ಷರು.—ಉಚಿತವೈದ್ಯೋಪಚಾರ ಒದಗಿಸಬೇಕೆಂದು ನಿರ್ಣಯದಲ್ಲಿದೆ.

ಶ್ರೀ ಹೆಚ್, ಗಂಗಾಧರನ್.—ನಿರ್ಣಯದಲ್ಲಿ,

"This Assembly resolves to provide free medical treatment by the Government to all the citizens living in the State".

ಎಂದು ಇದೆ. ಎಲ್ಲರಿಗೂ ಉಚಿತ ವೈದ್ಯೋಪಚಾರ ಕೊಡಬೇಕು ಎಂದು ಇದೆ, ಆದರೆ ಕೊಡುತ್ತಾ ಇಲ್ಲ. ಸಿಗುತ್ತಾ ಇಲ್ಲ, ಆಸ್ಪತ್ರೆಗಳಲ್ಲಿ ನೋಡಿದ್ದೇವೆ. ಉದಾಹರಣೆಗೆ ಮೈಸೂರು ಆಸ್ಪತ್ರೆಯನ್ನು ತೆಗೆದುಕೊಂಡರೆ, ೧೯೫೫ನೇ ಇಸವಿಯಲ್ಲಿ ೫೦ ಸಾವಿರ ಜನಸಂಖ್ಯೆ ಎನಿತ್ತೊ ಆಪತ್ತಿನ ಜನರಿಗೆ ಅನುಕೂಲವಾಗುವಂತೆ ಆಸ್ಪತ್ರೆಯನ್ನು ನಿರ್ಮಾಣ ಮಾಡಿದ್ದರು. ಆದರೆ ೧೯೫೫ನೇ ಇಸವಿಯಲ್ಲಿ ೫ ಲಕ್ಷ ಜನಸಂಖ್ಯೆ ಇದೆ. ಆದಕ್ಕನುಗುಣವಾಗಿ ಇದು ೪ರಷ್ಟು, ೫ರಷ್ಟು ವಿಸ್ತೃತವಾಗಬೇಕಾಗಿತ್ತೋ ಆಷ್ಟು ವಿಸ್ತೃತವಾಗಬೇಕು.

ಶ್ರೀ ವೈ. ರಾಮಕೃಷ್ಣ.—ನ್ಯೂ ಸರ್ಜಿಕಲ್ ವಾರ್ಡ್ ಯಾವಾಗ ಕಟ್ಟಿದ್ದು

ಶ್ರೀ ಹೆಚ್. ಗಂಗಾಧರನ್.—ಇತ್ತೀಚೆಗೆ ಕಟ್ಟಿರಬಹುದು. ಆದರೆ ಎಷ್ಟು ಜನಕ್ಕೆ ಅದರಿಂದ ಸೌಲಭ್ಯ ಸಿಕ್ಕಿದೆ ಮೈಸೂರಿನಲ್ಲಿ ೫ಲಕ್ಷ ಜನಸಂಖ್ಯೆ ಇದೆ ಮೈಸೂರು ಜಿಲ್ಲೆಯಲ್ಲಿ ಎಷ್ಟು ಜನವಿದ್ದಾರೆ. ಮೈಸೂರು ಬಿಟ್ಟರೆ ಜಿಲ್ಲೆಯಲ್ಲಿ ಬೇರೆ ಅನುಕೂಲವಿದೆಯೇ ಮೈಸೂರು ಜಿಲ್ಲೆಯಲ್ಲಿ ನಾಲ್ಕೈದರಷ್ಟು ಜನಸಂಖ್ಯೆ ಅಧಿಕವಾಗಿರುವಾಗ ಅಧಿಕವಾಗಿರತಕ್ಕ ಜನರಿಗೆ ವೈದ್ಯಕೀಯ ಸೌಲಭ್ಯ ಸಿಗುತ್ತಿದೆಯೇ ಎಂದು ವಿಚಾರಮಾಡಿದಾಗ ವೈದ್ಯಕೀಯ ಸೌಲಭ್ಯವನ್ನು ಸಾಕಷ್ಟು ವಿಸ್ತೃಗೊಳಿಸಿಲ್ಲ. ಸಾಕಷ್ಟು ವೈದ್ಯಕೀಯ ಸೌಲಭ್ಯ ಜನರಿಗೆ ಸಿಕ್ಕಿಲ್ಲ ಸಾಮಾನ್ಯವಾಗಿ ಎಲ್ಲರಿಗೂ ಒದಗಿಸತಕ್ಕ ವೈದ್ಯಕೀಯ ಸೌಲಭ್ಯಗಳಿಲ್ಲ ಎನ್ನುವುದನ್ನು ನಾವು ನೋಡುತ್ತಿರುತ್ತೇವೆ. ರೋಗಿಗಳಿಗೆ ಕಾಯಿಲೆ ಇನ್ನೂ ಇದ್ದರೂ ಆಸ್ಪತ್ರೆಯಲ್ಲಿ ಜಾಗವಿಲ್ಲದೆ, ಉಪಚಾರ ಮಾಡುವುದಕ್ಕೆ ಅವಕಾಶವಿಲ್ಲದೆ ಅವರು ಹೋಗತಕ್ಕ. ಪರಿಸ್ಥಿತಿಯನ್ನು ನಾವು ಪ್ರತಿನಿತ್ಯ ನೋಡುತ್ತಾ ಇದ್ದೇವೆ. ಕ್ಷಯರೋಗದ ಆಸ್ಪತ್ರೆಯಲ್ಲಂತೂ ಬಹಳ ಚಿಂತಾಜನಕ ಸ್ಥಿತಿ ಇದೆ. ಪ್ರತಿನಿತ್ಯ ಇಬ್ಬರಾದರೂ ಅಲ್ಲಿ ಮುಫತ್ತಾಗಿ ಸೇರುವುದಕ್ಕೆ ಶಿಫಾರಸು ಪತ್ರ ಪಡೆಯುವುದಕ್ಕೆ ಬೆಮತ್ತಾರೆ ವೈದ್ಯರು ಜಾಗ ಇಲ್ಲ ಎಂದು ಹೇಳುತ್ತಾರೆ, ಕ್ಷಯರೋಗ ತೀವ್ರವಾಗಿದ್ದರೂ, ಔಷಧೋಪಚಾರ ಪಡೆಯತಕ್ಕ ಅವಕಾಶ ಸಾಮಾನ್ಯ ಜನತೆಗೆ ಇರುವುದಿಲ್ಲ. ಆದರಲ್ಲೂ ಕ್ಷಯರೋಗ ಆಸ್ಪತ್ರೆಯನ್ನು ಏನು ಬಡಾಪಣೆ ಮಾಡಿದ್ದೀರಿ, ಅದನ್ನು ಕಟ್ಟಿದಲಾಗಾಯ್ತು ಒಂದು ಕೊಠಡಿಯೂ ವಿಸ್ತೃತವಾಗಿಲ್ಲ, ಇದು ನಿಜವಾಗಿಯೂ ಶೋಚನೀಯವಾಗಿರತಕ್ಕಂಥಾದು ಇದರ ಜೊತೆಗೆ ಕ್ಷಯರೋಗ ಆಸ್ಪತ್ರೆಗಳನ್ನು ಎಷ್ಟು ಸ್ಥಾಪನೆ ಮಾಡಿದ್ದೀರಿ, ಮೈಸೂರಿನಲ್ಲಿ ಯಾವುದೋ ಒಂದು ಸಾರ್ವಜನಿಕ ಆಸ್ಪತ್ರೆಯಿದೆ. ಯಾವುದೋ ಜೈನ ಮಂಡಲಿ ಉಚಿತವಾಗಿ ಸಣ್ಣದಾದಂಥ ಆಸ್ಪತ್ರೆಯನ್ನು ಕಟ್ಟಿಸಿ, ವೈದ್ಯರನ್ನು ಕರೆತಂದ ಉಚಿತವಾಗಿ ವೈದ್ಯಕೀಯ ಸೌಲಭ್ಯವನ್ನು ಕೊಡಿಸುತ್ತಾ ಇದೆ. ಇವತ್ತು ದೇಶದಲ್ಲಿ ಸಹಸ್ರಾರು ಜನ ಕುಷ್ಠರೋಗಿಗಳಿದ್ದಾರೆ. ಕರ್ನಾಟಕದಲ್ಲಿ ಕುಷ್ಠರೋಗಿಗಳಿಗೆ ಸೂಕ್ತವಾದ ಚಿಕಿತ್ಸೆಯನ್ನು ಕೊಡತಕ್ಕ ಸೌಲಭ್ಯಗಳು ಸಾಕಷ್ಟು ವಿಸ್ತೃತವಾಗಿಲ್ಲ ಎನ್ನುವುದನ್ನು ಈ ಸಭೆ ಮನಗಂಡಿದೆ ಎಂದು ನಾನು ಭಾವಿಸಿದ್ದೇನೆ. ಈ ಬಗ್ಗೆ ತೀವ್ರವಾದ ಆಸಕ್ತಿ, ಗಮನ ಕೊಡತಕ್ಕಂಥಾದ್ದು ಅವಶ್ಯಕವಿದೆ. ಇವತ್ತಿನ ವಿಷಮ ಹೊಸ ಹೊಸ ರೋಗಗಳು ಉತ್ಪನ್ನವಾಗುತ್ತಾ ಇವೆ. ಇವನ್ನು ತಡೆಗಟ್ಟತಕ್ಕ ಕಾರ್ಯಕ್ರಮಗಳ

ದೇಶದಲ್ಲಿ ಸಾಕಷ್ಟು ನಡೆದಿಲ್ಲ. ಕಳೆದ ವರ್ಷದ ವರದಿಯನ್ನು ನೋಡಿದೆವು. ಅದರಲ್ಲಿ ೯೦೦ ಜನಕ್ಕೆ ಒಂದು ಹಾಸಿಗೆ ಎಂದು ಇದೆ. ಇದನ್ನು ಲೆಕ್ಕ ಹಾಕಿದರೆ ವೈದ್ಯಕೀಯ ಸೌಲಭ್ಯ ಬಹಳ ಅತ್ಯಲ್ಪ. ಈ ದೃಷ್ಟಿಯಿಂದ ಹೇಳುವುದಾದರೆ ಸರ್ಕಾರದಿಂದ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತೃತಗೊಳಿಸಿ ಎಲ್ಲ ಜನಕ್ಕೂ ಸುಲಭ ದರದಲ್ಲಿ ದೊರೆಯುವಂತೆ ಮಾಡಬೇಕು. ಮೂಭಿಂಗ್ ವ್ಯಾನುಗಳಲ್ಲಿ ಸರ್ವ ಸೌಲಭ್ಯಗಳನ್ನಿಟ್ಟು ಹಳ್ಳಿಗಳಲ್ಲಿ ಸಂಚಾರ ಮಾಡುವಂಥ ಸಂಚಾರಿ ಆಸ್ಪತ್ರೆಗಳನ್ನು ಮಾಡಬೇಕು. ಮೈಸೂರಿನಲ್ಲಿ ೪ ವ್ಯಾನುಗಳಿವೆ. ಅವುಗಳ ಪರಿಸ್ಥಿತಿ ಏನಾಗಿದೆಯೆಂದರೆ, ವ್ಯಾನುಗಳು ತಿರುಗಿ ಬಂದು ಮೆಡಿಕಲ್ ಕಾಲೇಜಿನಲ್ಲೇ ನಿಂತಿರುತ್ತವೆ. ಅವುಗಳು ಕಾಲೇಜು ಬಿಟ್ಟು ಹಳ್ಳಿಗೆ ಹೋಗುವುದಿಲ್ಲ. ಏಕೆ ಎಂದು ಕೇಳಿದಾಗ ಅದಕ್ಕೆ ವೈದ್ಯರ ನೇಮಕವಾಗಿಲ್ಲ ಎಂದು ಗೊತ್ತಾಯಿತು. ಆಸ್ಪತ್ರೆಗಳಲ್ಲಿ ವೈದ್ಯಕೀಯ ಶಿಕ್ಷಣ ಪಡೆದವರು ಸಾಕಷ್ಟು ಬರುತ್ತಾ ಇದ್ದಾರೆ. ಮೆಡಿಕಲ್ ಕಾಲೇಜು ಬೇಡ ಎಂದು ಹೋರಾಟ ನಡೆಯುತ್ತಾ ಇದೆ. ಇಷ್ಟಾದರೂ ಬರತಕ್ಕಂಥಾ ವೈದ್ಯರಿಗೆ ನೌಕರಿ ಸಿಗುತ್ತಾ ಇಲ್ಲ, ಆಸ್ಪತ್ರೆಗಳಲ್ಲಿ ಕೆಲಸ ನಡೆಯುತ್ತಾ ಇಲ್ಲ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿರತಕ್ಕಂಥ ವೈದ್ಯಕೀಯ ವಾಹನಗಳು ನಿರುಪಯುಕ್ತವಾಗಿ ಮೆಡಿಕಲ್ ಕಾಲೇಜಿನಲ್ಲಿ ನಿಂತಿರತಕ್ಕಂಥಾದ್ದನ್ನು ನಾವು ಕಾಣುತ್ತಾ ಇದ್ದೇವೆ.

ಇದರ ಬಗ್ಗೆ ನಾವು ಅನೇಕ ಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ವಾಹನಗಳು ಹಳ್ಳಿ ಹಳ್ಳಿಗೂ ಪ್ರತಿನಿತ್ಯ ಸಂಚಾರ ಮಾಡಿ ಔಷಧೋಪಚಾರವನ್ನು ಒದಗಿಸತಕ್ಕ ವ್ಯವಸ್ಥೆ ಆಗಿಲ್ಲ ಎನ್ನುತಕ್ಕದ್ದನ್ನು ಮನಗಂಡಿದ್ದೇವೆ. ಲಕ್ಷಾಂತರ ರೂಪಾಯಿಗಳನ್ನು ಉದಾರವಾಗಿ ವಿದೇಶಿಯರು ಕೊಟ್ಟಿದ್ದಾರೆ ನಮ್ಮ ಸರ್ಕಾರ ಕೂಡ ಅದಕ್ಕಾಗಿ ಹಣ ವೆಚ್ಚ ಮಾಡುತ್ತಿದೆ, ಆದರೂ ಕೂಡ ಆ ಸಂಚಾರಿ ವಾಹನಗಳಿಂದ ಉಪಯೋಗವಾಗದೇ ಇರುವಂಥ ಪರಿಸ್ಥಿತಿಯನ್ನು ನೋಡಿದರೆ ಮತ್ತು ಸರ್ಕಾರ ಇದರ ಕಡೆಗೆ ಗಮನವನ್ನು ಹರಿಸಿಲ್ಲವೆಂದರೆ ಬಹಳ ಶೋಚನೀಯವೆನಿಸುತ್ತದೆ. ಮೆಡಿಕಲ್ ಡಿಪಾರ್ಟ್‌ಮೆಂಟ್ ಗೋಸ್ಕರವಾಗಿ ನಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ದೀನದಲಿತರಿಗೆ ಸಹಾಯ ಮಾಡುವುದಕ್ಕೆ ವ್ಯವಸ್ಥೆಯಾಗಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿ ಇವತ್ತು ಇರತಕ್ಕ ಪರಿಸ್ಥಿತಿಯನ್ನು ಬದಲಾಪಣೆ ಮಾಡಿ ಎಲ್ಲಿ ಆಸ್ಪತ್ರೆಯ ಅವಶ್ಯಕತೆ ಇದೆಯೋ ಅಲ್ಲಿಗೆಲ್ಲಾ ಈ ಸಂಚಾರ ವಾಹನಗಳನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡಿ ಎಲ್ಲರಿಗೂ ಉಚಿತವಾಗಿ ವೈದ್ಯಕೀಯ ಔಷಧೋಪಚಾರ ದೊರೆಯುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಈ ಸಭೆ ಒಪ್ಪುತ್ತದೆಂದು ಭಾವಿಸುತ್ತೇನೆ, ಶ್ರೀ ರಾಂದೇವ್‌ರವರು ತಂದಿರತಕ್ಕ ಈ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

† ಶ್ರೀ ಎಂ. ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಪಿ. ರಾಮ್‌ದೇವ್ ರವರು ತಂದಿರತಕ್ಕ ನಿರ್ಣಯವನ್ನು ಬೆಂಬಲಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಎಲ್ಲಾ ಜನರಿಗೂ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು ಎನ್ನತಕ್ಕದ್ದು ಎಲ್ಲರ ಅಭಿಪ್ರಾಯ. ಸರ್ಕಾರ ಕೂಡ ಆ ಬಗ್ಗೆ ಯೋಚನೆ ಮಾಡುತ್ತಿದೆ. ಆದರೆ ಇವತ್ತು ವೈದ್ಯಕೀಯ ಉಪಚಾರ ಸರಿಯಾದ ರೀತಿಯಲ್ಲಿ ಸಿಗುತ್ತಿಲ್ಲ. ಕಾರಣ ಅದಕ್ಕೆ ಹಲವಾರು ಇದೆ. ಇವತ್ತು ತಮಗೆ ಉದಾಹರಣೆಗೆ ಹೇಳುವುದಾದರೆ ನಮ್ಮ ದಾವಣಗೆರೆ ನಗರದಲ್ಲಿರತಕ್ಕ ಒಂದು ಆಸ್ಪತ್ರೆಯ ವಿಷಯವನ್ನೇ ತೆಗೆದುಕೊಂಡರೆ, ಅಲ್ಲಿರತಕ್ಕದ್ದು ಒಂದು ದೊಡ್ಡ ಆಸ್ಪತ್ರೆ, ಸುಮಾರು ೧ ಸಾವಿರ ಹಾಸಿಗೆಯುಳ್ಳ ಆಸ್ಪತ್ರೆ. ಆದರೆ ಅಲ್ಲಿಗೆ ಬರತಕ್ಕ ರೋಗಿಗಳಿಗೆ ಸರಿಯಾಗಿ ಔಷಧಿ ಕೊಡುವುದಕ್ಕೆ ವ್ಯವಸ್ಥೆ ಇಲ್ಲ. ಯಾರು ಬಂದರೂ ಕೂಡ ಕೇವಲ ಚೀಟಿ ಬರೆದು ಕೊಡತಕ್ಕ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಏತಕ್ಕೆ ಔಷಧಿ ಕೊಡುವುದಿಲ್ಲವೆಂದು ಕೇಳಿದರೆ ಗ್ರಾಂಟ್ ಇಲ್ಲ, ಔಷಧಿ ಬಂದಿಲ್ಲ, ಸರ್ಕಾರ ಕೊಡತಕ್ಕ ಹಣ ಸಾಕಾಗುವುದಿಲ್ಲದೆಂದು ತಿಳಿಸುತ್ತಾರೆ. ಈ ಆಸ್ಪತ್ರೆಗೆ ಬರತಕ್ಕ ಸಾಮಾನ್ಯ ಜನರು ಚೀಟಿ ಗೋಸ್ಕರವಾಗಿ ಒಂದು ಸಾರಿ ಲೈನ್‌ನಲ್ಲಿ ನಿಂತುಕೊಂಡು, ಇಂಜೆಕ್ಷನ್ ಮತ್ತು ಔಷಧಿಗೋಸ್ಕರ ಮತ್ತೆ ಇನ್ನೊಂದು ಸಾರಿ ಲೈನ್‌ನಲ್ಲಿ ನಿಂತುಕೊಂಡು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಇಂಥಾ ದೊಡ್ಡ ಆಸ್ಪತ್ರೆಗಳ ಪರಿಸ್ಥಿತಿಯೇ ಹೀಗಾದರೆ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಣ್ಣ ಸಣ್ಣ ಆಸ್ಪತ್ರೆಗಳ ಪರಿಸ್ಥಿತಿಯನ್ನು ಹೇಳುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ, ಅದನ್ನು ಸುಧಾರಣೆ ಮಾಡುವುದಕ್ಕೆ ಎಷ್ಟರಮಟ್ಟಿಗೆ ಕಾರ್ಯಕ್ರಮವನ್ನು ಕೈಗೊಳ್ಳು

† Indicates that remarks or speeches have not been revised by the member concerned.

ತ್ತಿದ್ದೀರಿ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಆದುದರಿಂದ ಸರ್ಕಾರ ಆದಷ್ಟು ಮಟ್ಟಿಗೆ ಇದರ ಕಡೆಗೆ ಹೆಚ್ಚಿನ ಗಮನವನ್ನು ಪರಿಸಬೇಕಾಗಿದೆ. ಇನ್ನು ನಮ್ಮ ದಾವಣಗೆರೆಯಲ್ಲಿರತಕ್ಕ ಜನರಲ್ ಆಸ್ಪತ್ರೆ ವಿಸಿದೆ ಆಲ್ಲಿ ಸುಮಾರು ೨೦ ಬೆಡ್‌ಗೆ ಒಬ್ಬ ನರ್ಸ್ ಇದ್ದಾರೆ, ಒಬ್ಬ ನರ್ಸ್ ಯಾರಾದರೂ ಬಾರದಿದ್ದರೆ ಅವತ್ತಿನ ದಿವಸ ೪೦ ಬೆಡ್‌ಗಳನ್ನೂ ಸಹ ಒಬ್ಬ ನರ್ಸೇ ನೋಡಿಕೊಳ್ಳಬೇಕಾಗಿದೆ. ಇಂಥಾ ಪರಿಸ್ಥಿತಿಯಲ್ಲಿ ತುರ್ತಾಗಿ ಔಷಧೋಪಚಾರವನ್ನು ಮಾಡತಕ್ಕವರಿಗೆ ಬಹಳ ಕಷ್ಟವಾಗುತ್ತದೆ. ಎಲ್ಲಾ ಕಡೆಗೂ ಕೂಡ ಜನರಲ್ ಆಸ್ಪತ್ರೆ ಇರುವ ಕಡೆ ನರ್ಸಿಂಗ್ ಟ್ರೈನಿಂಗ್ ಸ್ಕೂಲ್‌ಗಳನ್ನು ಇಟ್ಟಿರುತ್ತಾರೆ. ಇಂಥಾ ತುರ್ತು ಸಮಯದಲ್ಲಿ ಅವರ ಸಹಾಯವನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆಂದು ನಾವು ಅನೇಕ ಸಾರಿ ಮನವಿ ಮಾಡಿಕೊಂಡಿದ್ದೇವೆ, ಆದರೆ ಇದರ ಬಗ್ಗೆ ಸರ್ಕಾರ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಕೇವಲ ಔಷಧಿ ಕೊಡುವುದು ಮಾತ್ರವಲ್ಲ ಔಷಧೋಪಚಾರವನ್ನು ಮಾಡತಕ್ಕ ವ್ಯವಸ್ಥೆ ಕೂಡ ಸರಿಯಾದ ರೀತಿಯಲ್ಲಿ ಇಲ್ಲ. ಈಗಾಗಲೇ ನಮ್ಮ ಶ್ರೀ ಗಂಗಾಧರನ್‌ರವರು ಹೇಳಿದಂತೆ ಈ ಸಂಚಾರಿ ಆಸ್ಪತ್ರೆಗಳ ವಾಹನಗಳು ನೋಡುವುದಕ್ಕೇನೋ ಬಹಳ ಚೆನ್ನಾಗಿದೆ, ಆದರೆ ಅದರಿಂದ ಉಪಯೋಗ ಮಾತ್ರ ಸಾಮಾನ್ಯ ಜನರಿಗೆ ಆಗುತ್ತಿಲ್ಲ. ಅದಕ್ಕೆ ಕಾರಣವಿಷ್ಟೆ, ಆಸ್ಪತ್ರೆ ಇದ್ದು, ಔಷಧಿ ಇರುವುದಿಲ್ಲವೆಂದು ಹೇಳುವಾಗ ಸಂಚಾರಿ ಆಸ್ಪತ್ರೆಯನ್ನಿಟ್ಟುಕೊಂಡು ಔಷಧಿಯನ್ನು ಕೊಡುವುದಕ್ಕೆ ಆಗುತ್ತದೆಯೇ ? ಆಗುವುದಿಲ್ಲ. ಆದುದರಿಂದ ಇವತ್ತು ಸಾಮಾನ್ಯ ಜನರಿಗೆ ಪುಕ್ಕಟೆಯಾಗಿ ಔಷಧಿಯನ್ನು ಒದಗಿಸುತ್ತಿದ್ದೇವೆಂದು ಹೇಳುತ್ತಿರತಕ್ಕದು ಜನರಿಗೆ ವಂಚಿಸುವ ರೀತಿಯಲ್ಲಿ ಆಗುತ್ತಿದೆಯೇ ಹೊರತು ಬೇರೆ ಏನೂ ಆಗುತ್ತಿಲ್ಲ. ಆದುದರಿಂದ ಸಾಮಾನ್ಯ ಜನರಿಗೆಲ್ಲರಿಗೂ ಪುಕ್ಕಟೆಯಾಗಿ ಔಷಧೋಪಚಾರವನ್ನು ಒದಗಿಸುವುದಕ್ಕೆ ಸಾಕಷ್ಟು ಪಣ ಸಹಾಯವನ್ನು ಒದಗಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ತಮಗೊಂದು ಉದಾಹರಣೆಗೆ ಹೇಳುವುದಾದರೆ ಕಾರ್ಮಿಕರಿಗೆ ಇ.ಎಸ್.ಐ. ಎಂದು ಕೆಲವು ಕಡೆ ಇದೆ ಬೇರೆ ಕಡೆ ಕೈಗಾರಿಕೆಗಳು ಇರತಕ್ಕಂಥ ಕ್ಷೇತ್ರಗಳಲ್ಲಿ ಸರ್ಕಾರ ಇದನ್ನು ಜಾರಿಗೆ ತಂದಿಲ್ಲ. ಕಾರ್ಮಿಕರಿಂದ ಮತ್ತು ಮಾಲೀಕರಿಂದ ಹಣವನ್ನು ಸಂಗ್ರಹಣೆ ಮಾಡಿ ಆ ಮೂಲಕ ಇವತ್ತು ಕಾರ್ಮಿಕರಿಗೆ ಔಷಧೋಪಚಾರವನ್ನು ಒದಗಿಸಬೇಕೆಂದು ಇದೆ, ಅದೇ ರೀತಿ ಹಣವನ್ನು ಸಹ ವಸೂಲಿ ಮಾಡುತ್ತಿದ್ದಾರೆ ಆದರೆ ಅವರಿಗೆ ಸರಿಯಾದ ವ್ಯವಸ್ಥೆ ಇಲ್ಲಿಯವರೆಗೆ ಆಗಿಲ್ಲ. ಇದಕ್ಕೆ ತಮಗೆ ಉದಾಹರಣೆಗೆ ಹೇಳುವುದಾದರೆ ದಾವಣಗೆರೆಯಲ್ಲಿ ಯಾರಿಗಾದರೂ ಟಿ.ಬಿ. ಬಂದರೆ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬರಬೇಕಾಗಿದೆ ದಾವಣಗೆರೆಯಲ್ಲಿ ಒಂದು ಟಿ.ಬಿ. ಆಸ್ಪತ್ರೆಯನ್ನು ಕಟ್ಟುವುದಕ್ಕಾಗಿ ಸ್ಥಳವನ್ನು ತೆಗೆದುಕೊಂಡಿದ್ದರೂ ಸಹ ಸುಮಾರು ವರ್ಷಗಳಿಂದ ಆ ಬಗ್ಗೆ ಎಸ್ಟಿಮೇಟ್ ಆಗಬೇಕು, ಪ್ಲಾನ್ ಆಗಬೇಕು, ಪ್ಲಾನ್ ಅಪ್ರೂವ್ ಆಗಬೇಕು ಎಂದು ಬರೀ ಈ ರೀತಿಯಾಗಿ ಹೇಳಿಕೊಂಡೇ ನಮ್ಮ ಸರ್ಕಾರ ಬರುತ್ತಿದೆ. ಈ ರೀತಿಯಾದರೆ ಎಲ್ಲರಿಗೂ ಔಷಧೋಪಚಾರವನ್ನು ಒದಗಿಸುವುದಕ್ಕೆ ಆಗುತ್ತದೆಯೇ? ಆದುದರಿಂದ ಯಾವುದು ಅತ್ಯಂತ ತ್ವರಿತಗತಿಯಲ್ಲಿ ಆಗಬೇಕಾಗಿದೆಯೋ ಅಂಥ ಕೆಲಸಗಳಿಗೆ ಸರ್ಕಾರ ದವರು ತೀವ್ರವಾಗಿ ಗಮನವನ್ನು ಹರಿಸಬೇಕಾಗಿದೆ. ಒಂದು ಕಡೆ ಹಣವಿಲ್ಲ, ಔಷಧಿ ಇಲ್ಲವೆಂದು ಹೇಳುತ್ತಾರೆ. ಆದರೆ ಇ.ಎಸ್.ಐ.ನಲ್ಲಿ ಬೇಕಾದಷ್ಟು ಹಣ ಇದೆ. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿಲ್ಲ. ಇವತ್ತು ಒಬ್ಬ ಕಾರ್ಮಿಕ ಆಸ್ಪತ್ರೆಗೆ ಹೋದರೆ ಅಲ್ಲಿ ಔಷಧಿ ಇರುವುದಿಲ್ಲ ಆದಕ್ಕಾಗಿ ಅವನು ಹೊರಗಡೆ ಹೋಗಿ ಹಣ ತೆತ್ತು ತೆಗೆದುಕೊಳ್ಳಬೇಕಾಗ ತ್ತದೆ ಮತ್ತು ಇಲ್ಲಿ ಇ.ಎಸ್.ಐ. ಗೆಂದು ಹಣ ಹಿಡಿದುಕೊಳ್ಳುತ್ತೀರಿ, ಹೀಗಾಗಿ ಅವನು ಎರಡೆರಡು ಕಡೆ ಹಣವನ್ನು ತೆತ್ತಬೇಕಾಗಿದೆ. ಇದರ ಬಗ್ಗೆ ಕೂಡ ಮಾನ್ಯ ಸಚಿವರು ತೀವ್ರವಾಗಿ ಗಮನ ಕೊಡಬೇಕಾಗಿದೆ, ಈ ಬಗ್ಗೆ ಯೋಚನೆ ಮಾಡಿ ಎಲ್ಲೆಲ್ಲಿ ಔಷಧಿಗಳು ಇಲ್ಲವೋ ಅಲ್ಲಿಗೆಲ್ಲಾ ಔಷಧಿಯನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೂ ಮತ್ತೆ ಇನ್ನು ಎಲ್ಲೆಲ್ಲಿ ಇ.ಎಸ್.ಐ ಯನ್ನು ಲಾಗು ಮಾಡಿಲ್ಲ ಅಂಥಾ ಕಡೆಗಳಲ್ಲೆಲ್ಲಾ ಇ.ಎಸ್.ಐನ್ನು ಲಾಗು ಮಾಡುವುದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ತಮಗೆ ಉದಾಹರಣೆಗೆ ಹೇಳುವುದಾದರೆ, ಅಧ್ಯಕ್ಷರೇ ತಮ್ಮ ಕ್ಷೇತ್ರವಾದ ಹಿರಿಯೂರಿನಲ್ಲಿರತಕ್ಕ ವಾಣಿವಿಲಾಸ್ ಸಕ್ಕರೆ ಕಾರ್ಖಾನೆ ಮುಂತಾದ ಸಣ್ಣಪುಟ್ಟ ಕಾರ್ಖಾನೆಗಳಲ್ಲಿ ಇ.ಎಸ್.ಐಯನ್ನು ಲಾಗು ಮಾಡದೇ ಇರುವುದರಿಂದ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನೆಲ್ಲವನ್ನೂ ಕೂಡ ಆದಷ್ಟು ಜಾಗ್ರತೆಯಾಗಿ ಗಮನಿಸಬೇಕಾಗಿರುವುದರಿಂದ ಶ್ರೀ ರಾಮ್‌ದೇವ್‌ರವರ ನಿರ್ಣಯ ಸೂಕ್ತವಾಗಿದೆ ಇದನ್ನು ಎಲ್ಲರೂ ಒಪ್ಪತಕ್ಕ ವಿಷಯವಾಗಿರುವುದರಿಂದ ನಾನು ಇದಕ್ಕೆ ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತಿದ್ದೇನೆ. ಅವರ ನಿರ್ಣಯ

ದಲ್ಲಿ ಕೆಲವು ಲೋಪದೋಷಗಳು ಇರಬಹುದು ಅದನ್ನು ಸರಿಪಡಿಸಿಕೊಂಡು ಇದರ ಬಗ್ಗೆ ಸರ್ಕಾರ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತದೆಂದು ನಾನು ಭಾವಿಸಿದ್ದೇನೆ. ಇಂಥಾ ಉಪಯುಕ್ತವಾದ ನಿರ್ಣಯಗಳು ಬರೀ ನಿರ್ಣಯಗಳಾಗಿ ಉಳಿಯದೇ ಅದರಿಂದ ಸಾರ್ವಜನಿಕರಿಗೆ ಉಪಯೋಗವಾಗುವುದಕ್ಕೆ ಸರ್ಕಾರ ಸೂಕ್ತವಾದ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರ ತಕ್ಕ ಕುಷ್ಠರೋಗದ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೀರಿ ಎಂದರೆ ಏನೂ ಇಲ್ಲ, ಇವತ್ತು ಕುಷ್ಠರೋಗಿಗಳು ಬಯಲಿನಲ್ಲಿ ತಿರುಗಾಡುತ್ತಿದ್ದಾರೆ ಇದು ಅಂಟುಜಾಡ್ಯ. ಬೇರೆಯವರಿಗೆ ಅಂಟುತ್ತದೆಂದು ಗೊತ್ತಿದ್ದಾಗ್ಯೂ ಸಹ ಸರ್ಕಾರ ಏನು ಕ್ರಮ ಕೈಗೊಂಡಿಲ್ಲ. ದಾವಣಗೆರೆಯ ಹತ್ತಿರವಿರುವ ಕೊಂಡಜ್ಜಿಯಲ್ಲಿ ಒಂದು ಆಸ್ಪತ್ರೆಯನ್ನು ತೆರೆಯುವ ಬಗ್ಗೆ ಒಬ್ಬರು ಪ್ರಯತ್ನಪಟ್ಟರು. ಆದರೂ ಸಹ ಸರ್ಕಾರ ದಿಂದ ಇದರ ಬಗ್ಗೆ ಸರಿಯಾದ ಪ್ರೋತ್ಸಾಹ ಅವರಿಗೆ ಸಿಕ್ಕಲಿಲ್ಲ ಎನ್ನುವುದು ನನ್ನ ಭಾವನೆ. ಟಿ.ಬಿ. ಆಸ್ಪತ್ರೆಯೊಂದು ನಮ್ಮ ದಾವಣಗೆರೆಯಲ್ಲಿ ಇತ್ತು, ಆ ಆಸ್ಪತ್ರೆಯನ್ನು ಕೆಡವಿ ಹಾಕಿ ಜನರಲ್ ಆಸ್ಪತ್ರೆಗೆ ಸೇರಿಸಿಕೊಂಡಿದ್ದಾರೆ, ಅಲ್ಲಿ ೨೦ ಬೆಡ್ ಕೊಡುತ್ತೇವೆಂದು ಹೇಳಿದ್ದರು ಅದನ್ನು ಕೊಟ್ಟಿಲ್ಲ. ಅಲ್ಲಿ ಇವತ್ತು ಹತ್ತಿ ಗಿರಣಿಗಳು ಇದೆ, ಬೀಡಿ ಕೆಲಸಗಾರರಿದ್ದಾರೆ ಅವರಿಗೆ ಪ್ರತ್ಯೇಕವಾದ ಔಷದೋಪಚಾರ ಮಾಡುವ ಬಗ್ಗೆ ವ್ಯವಸ್ಥೆಯಾಗಿಲ್ಲ. ಇವತ್ತು ಸಾಮಾನ್ಯವಾಗಿ ಎಲ್ಲರಿಗೂ ಪುಕ್ಕಟೆಯಾಗಿ ಔಷದೋಪಚಾರವನ್ನು ಒದಗಿಸಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದ್ದರೂ ಸಹ ಅದರಂತೆ ನಡೆಯುತ್ತಿಲ್ಲ. ನಾನು ಮಾಸ್ಕೋಗೆ ಹೋಗಿದ್ದಾಗ ಅಲ್ಲಿ ನೋಡಿದರೆ ಹುಟ್ಟಿದ ಮಗುವಿನಿಂದ ಹಿಡಿದು ಸಾಯುವ ತನಕ ಆರೋಗ್ಯಪಾಲನೆಯ ಹೊಣೆಯನ್ನು ಸರ್ಕಾರ ಗಮನಹರಿಸಿ ನೋಡಿಕೊಳ್ಳುತ್ತಿದೆ. ಇವತ್ತು ಆ ಒಂದು ವ್ಯವಸ್ಥೆ ಇಲ್ಲಿಯೂ ಜಾರಿಗೆ ಬರಬೇಕೆಂದರೆ ಸರ್ಕಾರ ಅದಕ್ಕಾಗಿ ಬಹಳ ಬದಲಾವಣೆಯನ್ನು ಮಾಡಬೇಕಾಗಿದೆ. ಹಣವನ್ನು ಜಾಸ್ತಿ ಸಂಪಾದನೆ ಮಾಡಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ೧ ಲಕ್ಷ, ೨ ಲಕ್ಷ ಕೊಟ್ಟು ಡಾಕ್ಟರ್ ಆಗತಕ್ಕವನು ಹೇಗೆ ತಾನೇ ಪುಕ್ಕಟೆಯಾಗಿ ಔಷಧಿ ಕೊಡುತ್ತಾನೆ ? ಆದುದರಿಂದ ಇವತ್ತು ನಾವು ವಿದ್ಯಾಭ್ಯಾಸ ಪದ್ಧತಿಯನ್ನೇ ಬದಲಾವಣೆ ಮಾಡಿ ಇದರಲ್ಲಿ ಆಸಕ್ತಿಯಿಂದ ದುಡಿಯುತಕ್ಕಂಥ ವೈದ್ಯರನ್ನು ನಿರ್ಮಾಣ ಮಾಡಬೇಕಾಗಿದೆ.

ಇವತ್ತು ಈ ಡ್ಯಾಮಿಂಗ್ ಎನ್ನುತಕ್ಕದ್ದು ಇಡೀ ದೇಶದಲ್ಲಿಯೇ ನಡೆಯುತ್ತಿದೆ ಆದರಲ್ಲೂ ನಮ್ಮ ರಾಜ್ಯದ ಬಗ್ಗೆ ಹೇಳುವುದಾದರೆ ದಾವಣಗೆರೆಯಲ್ಲಿ ಜಾಸ್ತಿಯಾಗಿ ನಡೆಯುತ್ತಿದೆ. ಇದರಿಂದ ಮೊನ್ನೆ ನಮ್ಮ ದಾವಣಗೆರೆಯಲ್ಲಿ ಒಬ್ಬ ಹುಡುಗ ತನಗಾದ ನೋವು ಇನ್ನೊಬ್ಬರಿಗೆ ಆಗಬಾರದು ಎನ್ನುವ ದೃಷ್ಟಿಯಿಂದ ಪತ್ರ ಬರೆದಿಟ್ಟು ಸತ್ತುಹೋಗಿದ್ದಾನೆ. ಸರ್ಕಾರ ಏನು ಕ್ರಮವನ್ನು ಇದರ ಬಗ್ಗೆ ಕೈಗೊಂಡಿದ್ದಾರೆ ? ಇದೆಲ್ಲಾ ಆದಮೇಲೂ ಕೂಡ ಇಲ್ಲಿಯವರೆಗೆ ಏನೂ ಆಗಿಲ್ಲ. ಬರೀ ಕೇವಲ ೧೦ ಜನರನ್ನು ಹಿಡಿದು ಹಾಗಿದರೆ ಆಗುವುದಿಲ್ಲ. ಯಾರು ಇವತ್ತು ವಿದ್ಯಾರ್ಥಿಗಳ ಮನಸ್ಸಿಗೆ ಈ ಪದ್ಧತಿಯಿಂದ ಬಹಳ ತೊಂದರೆಯನ್ನುಂಟುಮಾಡಿ ತನ್ಮೂಲಕ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ ಅಂಥ ಈ ಒಂದು ಪದ್ಧತಿ ಹೋಗಲೇಬೇಕಾಗಿದೆ. ಯಾರಿಗೆ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿ ಇದೆ ಅಂಥವರಿಗೆ ಅವಕಾಶ ಒದಗಿಸಿಕೊಟ್ಟರೆ ನಿಜವಾದ ವೈದ್ಯರು ತಯಾರಾಗುತ್ತಾರೆ. ಅಂಥ ವೈದ್ಯರಿಂದ ಸರ್ಕಾರ ಕೈಗೊಳ್ಳತಕ್ಕ ಕಾರ್ಯಕ್ರಮವನ್ನು ಸಮರ್ಪಕವಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಎಲ್ಲ ವ್ಯವಸ್ಥೆಗಳು ಸರಿಹೋಗಬೇಕಾದರೆ ಇವತ್ತಿನ ಪದ್ಧತಿ ಬದಲಾಗಬೇಕು. ಈ ದಿಸೆಯಲ್ಲಿ, ಇವತ್ತು ತಂದಿರತಕ್ಕ ನಿರ್ಣಯ ಬಹಳ ಪ್ರಾಮುಖ್ಯವಾದುದಾಗಿದೆ. ಸಾಮಾನ್ಯವಾಗಿ, ಹಣ ಇದ್ದವರು ಚಿಕಿತ್ಸೆಗಾಗಿ ಎಲ್ಲಿಗೆ ಬೇಕಾದರೂ (ವಿದೇಶಕ್ಕೆ ಕೂಡ) ಹೋಗುತ್ತಾರೆ. ಹಣ ಇಲ್ಲದೆ ಇರುವವರಿಗೆ ಇವತ್ತು ಸರ್ಕಾರ ಸರಿಯಾದ ಔಷದೋಪಚಾರ ಮತ್ತು ಚಿಕಿತ್ಸೆಯನ್ನು ಒದಗಿಸಬೇಕಾಗಿದೆ. ಅಂಥವರ ಸರಿಯಾದ ಕಾಯಿಲೆಯನ್ನು ಕಂಡುಹಿಡಿದು ಅದಕ್ಕೆ ತಕ್ಕ ಚಿಕಿತ್ಸೆ ನೀಡಬೇಕಾಗಿದೆ ಇವತ್ತಿನ ದಿವಸ, ಆಸ್ಪತ್ರೆಗಳಲ್ಲಿ ಏನು ಮಾಡುತ್ತಾರೆಂದರೆ ಬಂದವರನ್ನೆಲ್ಲ ಸಾಲಾಗಿ ನಿಲ್ಲಿಸಿ ಚೀಟಿ ಬರೆದು ಕಳುಹಿಸಿಕೊಡುತ್ತಾರೆ. ಆದರಿಂದ ಅವರಿಗೆ ಏನೇನು ಪ್ರಯೋಜನವಾಗುವುದಿಲ್ಲ. ಅವರ ನಿಜವಾದ ಕಾಯಿಲೆಯನ್ನು ಕಂಡುಹಿಡಿದು ಅದಕ್ಕೆ ತಕ್ಕ ಚಿಕಿತ್ಸೆ ನೀಡಬೇಕಾದರೆ ಪ್ರತ್ಯೇಕ ಹಣ ಕೊಟ್ಟು ವೈದ್ಯರ ಮನೆಗೆ ಹೋದರೆ ಮಾತ್ರ ಸರಿಯಾದ ರೀತಿಯಲ್ಲಿ ಶುಶ್ರೂಷೆ ಮಾಡುತ್ತಾರೆ. ಇದು ಸಾಮಾನ್ಯ ಜನರಿಗೆ ನಿಲುಕಲಾರದ ಪ್ರಶ್ನೆಯಾಗಿದೆ. ಆದಕಾರಣ ಎಲ್ಲೆಲ್ಲಿ ವೈದ್ಯರಿಲ್ಲವೋ ಅಲ್ಲೆಲ್ಲ ಸಾಕಷ್ಟು ಮಂದಿ ವೈದ್ಯರುಗಳನ್ನು ನೇಮಿಸಬೇಕು. ಎರಡನೆಯದಾಗಿ, ೨೦ ಬೆಡ್‌ಗಳಿಗೆ ಒಬ್ಬರು ನರ್ಸ್ ಇರಬೇಕೆಂದು ಮಾಡಿರು

ವುದು ಕೂಡ ಖಂಡಿತ ಸಾಲದು. ಈ ರೀತಿ ವ್ಯವಸ್ಥೆ ಇದ್ದರೆ ಅವರು ರೋಗಗಳಿಗೆ ಎಷ್ಟರಮಟ್ಟಿನ ಉಪಚಾರ ಮಾಡಹುದೆಂಬುದನ್ನು ಗಮನಿಸಿದರೆ ಗೊತ್ತಾಗುತ್ತದೆ. ನಮ್ಮಂಥವರಾದರೆ ಆಸ್ಪತ್ರೆಗೆ ಹೋಗುವಾಗ ನಮ್ಮ ಜೊತೆಗೆ ಒಬ್ಬೊಬ್ಬರನ್ನು ಕರೆದುಕೊಂಡು ಹೋಗಿರುತ್ತೇವೆ. ಆದರೆ ಸಾಮಾನ್ಯ ಜನರೆಲ್ಲರೂ ಜೊತೆಗೊಬ್ಬೊಬ್ಬರನ್ನು ಕರೆದುಕೊಂಡು ಹೋಗುವುದು ಕಷ್ಟವಾಗುತ್ತದೆ. ಇದಕ್ಕೆಲ್ಲಾ ಸರ್ಕಾರದಲ್ಲಿ ಪ್ರತ್ಯೇಕ ವ್ಯವಸ್ಥೆ ಏನಾದರೂ ಇದೆಯೇ ? ಇಲ್ಲ. ಏನೂ ವ್ಯವಸ್ಥೆ ಮಾಡದೆ ಎಲ್ಲರಿಗೂ ಸಮರ್ಪಕವಾದ ಔಷಧೋಪಚಾರ ಒದಗಿಸುತ್ತೇವೆಂದು ಹೇಳಿದರೆ ಅದು ಖಂಡಿತ ಸಾಧ್ಯವಾಗದ ಮಾತು. ಮೇಲಾಗಿ ದಾವಣಗೆರೆಯಂತಹ ಜನರಲ್ ಆಸ್ಪತ್ರೆಗಳಲ್ಲಿ ನರ್ಸ್‌ಗಳೇನಿದ್ದಾರೆ ಅವರಿಗೆ ಸರಿಯಾದ ತರಬೇತಿ ಇರುವುದಿಲ್ಲ. ಮೆಡಿಕಲ್ ಕಾಲೇಜುಗಳಿರುವ ಕಡೆ ಇರತಕ್ಕ ಜನರಲ್ ಆಸ್ಪತ್ರೆಗಳಲ್ಲಿರತಕ್ಕ ನರ್ಸ್‌ಗಳು ಮಾತ್ರ ತರಬೇತಿ ಹೊಂದಿರುತ್ತಾರೆ. ದಾವಣಗೆರೆಯಲ್ಲಿ ಪ್ರತ್ಯೇಕವಾಗಿ ಜಯದೇವ ನರ್ಸಿಂಗ್ ಕ್ಲಾಸ್ ಎಂದು ಇದೆ, ಆದರೆ ಅವರಿಂದ ಎಲ್ಲರಿಗೂ ಪ್ರಯೋಜನ ದೊರೆಯುತ್ತಿಲ್ಲ. ಆದ್ದರಿಂದ ಜನರಲ್ ಆಸ್ಪತ್ರೆಗಳಿರುವ ಕಡೆಗಳಲ್ಲೆಲ್ಲ ಒಂದೊಂದು ತರಬೇತಿ ಕೇಂದ್ರಗಳನ್ನು ತೆಗೆದರೆ ಬಹಳ ಅನುಕೂಲವಾಗುತ್ತದೆ. ನಮ್ಮ ದಾವಣಗೆರೆಯಲ್ಲಿರತಕ್ಕ ಜನರಲ್ ಆಸ್ಪತ್ರೆಗೆ ಶಿವಮೊಗ್ಗ, ಚಿತ್ರದುರ್ಗ, ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಯ ಅನೇಕ ಗ್ರಾಮಾಂತರ ಪ್ರದೇಶಗಳ ಜನರು ಬರುತ್ತಾರೆ. ಆವರೆಲ್ಲರಿಗೂ ಸರಿಯಾದ ರೀತಿಯಲ್ಲಿ ಉಪಚಾರ ಸಿಗಬೇಕಾದರೆ ಅಲ್ಲಿನ ವ್ಯವಸ್ಥೆ ಸರಿಯಾಗಿ ಇರಬೇಕು. ಅದಕ್ಕೆ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳಬೇಕು. ಔಷಧೋಪಚಾರಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಅದು ಅಲ್ಲದೆ ಇದ್ದರೆ, ಆಲ್ಲಿಯ ವೈದ್ಯರು ಸುಮ್ಮನೆ ನೋಡಿ ಚೀಟಿ ಕೊಟ್ಟು ಕಳುಹಿಸುತ್ತಾರೆ. ಬರೀ ಚೀಟಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಅವರಿಗೆ ಔಷಧಿ ಕೊಟ್ಟಂತಾಗುವುದಿಲ್ಲ. ನೀವು ಸಾಕಷ್ಟು ಹಣವನ್ನು ಆಸ್ಪತ್ರೆಗಳಿಗೆ ಒದಗಿಸದೆ ಇದ್ದರೆ ನಾವು ತಂದ ನಿರ್ಣಯದಿಂದ ಕೂಡ ಸಾಮಾನ್ಯ ಜನರಿಗೆ ಏನು ಪ್ರಯೋಜನವಾಗುವುದಿಲ್ಲ. ದಯವಿಟ್ಟು ಇದನ್ನೆಲ್ಲ ಗಣನೆಗೆ ತೆಗೆದುಕೊಂಡು ಎಲ್ಲ ಆಸ್ಪತ್ರೆಗಳಲ್ಲೂ ಸರಿಯಾದಂತಹ ವ್ಯವಸ್ಥೆ ಮಾಡಬೇಕು. ಎಲ್ಲೆಲ್ಲಿ ಇ.ಎಸ್.ಐ. ಆಸ್ಪತ್ರೆಗಳಿಲ್ಲ ಅಂಥ ಕಡೆಗಳಲ್ಲೆಲ್ಲ ಇ.ಎಸ್ ಐ. ಆಸ್ಪತ್ರೆಗಳನ್ನು ತೆರೆಯತಕ್ಕ ವ್ಯವಸ್ಥೆ ಮಾಡಿದರೆ ಕಾರ್ಮಿಕರಿಗೆ ತುಂಬ ಅನುಕೂಲವಾಗುತ್ತದೆ. ಇ.ಎಸ್.ಐ.ನಲ್ಲಿ ಹಣ ಬೇಕಾದಷ್ಟು ಇದೆ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ, ಎಲ್ಲರಿಗೂ ಸಮರ್ಪಕವಾದ ಔಷಧೋಪಚಾರದ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತಾ ಮಾನ್ಯ ರಾಮದೇವ್‌ರವರು ತಂದಿರತಕ್ಕ ಈ ಒಂದು ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ (ಕಾನೂನು ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಮದೇವ್‌ರವರು ಈ ಒಂದು ಮುಖ್ಯವಾದ ನಿರ್ಣಯವನ್ನು ಸಭೆಯ ಮೂಲಕ ತಂದು ಸರ್ಕಾರದ ಗಮನವನ್ನು ಸೆಳೆದಿರುವುದಕ್ಕೋಸ್ಕರ ಅವರನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ಗಂಗಾಧರನ್‌ರವರು ಮತ್ತು ಮಾನ್ಯ ಪಂಪಾಪತಿಯವರು ಈ ನಿರ್ಣಯದ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುವುದರ ಮೂಲಕ ಈ ಒಂದು ಇಲಾಖೆಯಲ್ಲಿ ಅತ್ಯಗತ್ಯವಾಗಿ ಆಗಬೇಕಾದ ಕೆಲಸಗಳು ಏನು ಎಂಬುದನ್ನು ಹೇಳಿದ್ದಾರೆ.

ಶ್ರೀ ಪಿ. ರಾಮದೇವ್ —ಇವರು ಯಾವಾಗ ಆರೋಗ್ಯ ಮಂತ್ರಿಗಳಾದರು ?

ಶ್ರೀ ವೈ. ರಾಮಕೃಷ್ಣ.—ನಾನು ಈ ನಿರ್ಣಯದ ಚಾರ್ಜ್ ತೆಗೆದುಕೊಂಡಿದ್ದೇನೆ

ಅಧ್ಯಕ್ಷರು.—ಅವರು ಹಿಂದೆಯೇ ಆರೋಗ್ಯ ಸಚಿವರಾಗಿದ್ದು ಅನುಭವ ಪಡೆದಿದ್ದಾರೆ. ಈಗ ಆರೋಗ್ಯ ಸಚಿವರು ರಜದಲ್ಲಿರುವುದರಿಂದ ಇವರೇ ಉತ್ತರಿಸುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಕಳೆದ ಸಾರಿಯೇ ನಾನು ಈ ವಿಷಯದ ಬಗ್ಗೆ ಉತ್ತರಿಸಲು ಅನುಮತಿ ಪಡೆದಿರುವುದು ತಮಗೆ ಗೊತ್ತೇ ಇದೆ.

SRI A. LAKSHMISAGAR — Sir, this is a very important matter that is being discussed. It is in the fitnees of things that the Health Minister who is now presently holding the Health portfolio should be present here.

ಅಧ್ಯಕ್ಷರು.—ಈಗ ಆರೋಗ್ಯ ಸಚಿವರು ಇಲ್ಲದಿರುವುದರಿಂದ ಅವರ ಚಾರ್ಜನ್ನು ಇವರಿಗೆ ವಹಿಸಿದ್ದಾರೆ.

SRI A. LAKSHMISAGAR.—It looks as if in a casual manner the matter is being dealt with.

ಅಧ್ಯಕ್ಷರು.—ಕಾಷ್ಯುಯಲ್ ಮ್ಯಾನರ್ ಎಂದು ಹೇಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಯಾವಾಗಲೂ ಹಾಗೇ ಹೇಳುತ್ತಾರೆ, ನನ್ನನ್ನು ಕಂಡರೆ ಅವರಿಗೆ ವಿಶೇಷ ಪ್ರೀತಿ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರೀತಿಯನ್ನು ವ್ಯಕ್ತಪಡಿಸಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ರಾಮದೇವರ್‌ರವರು ತಂದಿರತಕ್ಕ ಈ ನಿರ್ಣಯ ರಾಜ್ಯದಲ್ಲಿ ರತಕ್ಕ ಎಲ್ಲ ಜನರಿಗೂ ಕೂಡ ಉಚಿತವಾಗಿ ವೈದ್ಯಕೀಯ ಸೌಲಭ್ಯವನ್ನು ಸರ್ಕಾರ ಒದಗಿಸಬೇಕೆಂದು ಆಗಿದೆ. ಇದರಲ್ಲಿ ನಮ್ಮ ಭಿನ್ನಾಭಿಪ್ರಾಯಗಳೇನು ಇಲ್ಲ. ಈ ತತ್ವಕ್ಕೆ ನಾವು ಕಟ್ಟುಬಿದ್ದಿದ್ದೇವೆ. ಇದರ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನಾವು ಹೊತ್ತಿದ್ದೇವೆ. ಅದನ್ನನುಸರಿಸಿ ರಾಜ್ಯದಲ್ಲಿ ರಾಜ್ಯ ಮಟ್ಟದಲ್ಲಿ, ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಸಾಧ್ಯವಾದ ಕಡೆ ಹೋಬಳಿಗಳಲ್ಲಿ ಹೋಬಳಿ ಮಟ್ಟದಲ್ಲಿ ಎಷ್ಟೆಷ್ಟು ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಬೇಕೋ ಅಷ್ಟೆಲ್ಲ ವನ್ನು ಸರ್ಕಾರ ಮಾಡಿದೆ ಮತ್ತು ಮಾಡುತ್ತಿದೆ. ಅದು ತಮಗೂ ಗೊತ್ತಿದೆ.

ಅಧ್ಯಕ್ಷರು.—ವರಮಾನ ಮಿತಿ ಏನಿದೆ ಅದನ್ನು ಆಧಾರವಾಗಿಟ್ಟುಕೊಂಡು, ಅಂದರೆ ಇಷ್ಟು ವರಮಾನಕ್ಕಿಂತ ಜಾಸ್ತಿ ಇದ್ದವರಿಗೆ ಚಾರ್ಜ್ ಮಾಡಬೇಕೆಂದು ಏನಿದೆ ಆ ಕ್ರಮವನ್ನು ಇಟ್ಟುಕೊಂಡು ಎಲ್ಲರಿಗೂ ಉಚಿತವಾಗಿ ವೈದ್ಯಕೀಯ ಸೌಲಭ್ಯ ದೊರೆಯಬೇಕೆಂದು ಹೇಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಆ ವಿಷಯವನ್ನು ಕೂಡ ನಾನು ಹೇಳುತ್ತೇನೆ. ಈಗ ಮಾನ್ಯ ರಾಮದೇವ್‌ರವರು ಹಣ ಕೊಟ್ಟವರಿಗೆ ಮಾತ್ರ ಚಿಕಿತ್ಸೆ ದೊರೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದು ಸತ್ಯಕ್ಕೆ ದೂರವಾದ ಸಂಗತಿ. ಎಲ್ಲರಿಗೂ ಉತ್ತಮವಾದ ಚಿಕಿತ್ಸೆ ದೊರೆಯುವಂತೆ ಮಾಡಬೇಕು, ಪ್ರಯೋಗಾಲಯಗಳಲ್ಲಿ ರಕ್ತ ಪರೀಕ್ಷೆ, ಮಲ ಮೂತ್ರಗಳ ಪರೀಕ್ಷೆ ಇಂಥದಕ್ಕೆಲ್ಲ ಕೊಡ ಪ್ರತಿಯೊಬ್ಬರಿಗೂ ಸಹ ಹಳ್ಳಿ ಮಟ್ಟದಲ್ಲಿ ಅವಕಾಶ ದೊರೆಯಬೇಕೆಂಬ ತತ್ವ ನಿಜವಿದ್ದರೂ ಅಷ್ಟು ಮಟ್ಟದಲ್ಲಿ ಸೌಲಭ್ಯ ಕಲ್ಪಿಸಲು ನಮ್ಮ ಸರ್ಕಾರದಲ್ಲಿ ಹಣ ಇಲ್ಲ. ಅದಕ್ಕೋಸ್ಕರ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಕೆಲವು ಸೌಕರ್ಯಗಳನ್ನು ಕಲ್ಪಿಸಿದ್ದೇವೆ. ಉದಾಹರಣೆಯಾಗಿ. ಮಾನ್ಯ ಪಂಪಾಪತಿಯವರು ಟಿ. ಬಿ. ರೋಗಿಗಳ ಬಗ್ಗೆ ಹೇಳುತ್ತಾ, ದಾವಣಗೆರೆಯ ಟಿ.ಬಿ. ರೋಗಳು ಚಿಕಿತ್ಸೆಗಾಗಿ ಬೆಂಗಳೂರಿಗೆ ಬರಬೇಕಾಗಿದೆ ಎಂಬ ಮಾತನ್ನು ಹೇಳಿದರು. ಅದು ಮೆಡಿಕಲ್ ಕೇಸ್ ಆದರೆ ಅಲ್ಲೇ ಚಿಕಿತ್ಸೆ ಮಾಡಬಹುದು. ಆದರೆ ಸರ್ಜಿಕಲ್ ಕೇಸ್ ಆದರೆ ಅದನ್ನು ಅಲ್ಲಿ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅದಕ್ಕೆ ಬೇಕಾದ ಸಲಕರಣೆಗಳು ಅಲ್ಲಿ ಇರುವುದಿಲ್ಲ. ಅದಕ್ಕೋಸ್ಕರ ಆಪರೇಷನ್ ಥಿಯೇಟರ್‌ಗಳಿರುವ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಸಂಬಂಧಪಟ್ಟ ರೋಗಿಗಳನ್ನು ಕರೆಸಿಕೊಂಡು ಚಿಕಿತ್ಸೆ ಮಾಡಿ ಅವರ ಪ್ರಾಣವನ್ನು ಉಳಿಸಬೇಕಾಗುತ್ತದೆ. ಕೇವಲ ಔಷಧಿ ಗುಳಿಗೆಗಳನ್ನು ಕೊಟ್ಟು ಕಾಯಿಲೆಯನ್ನು ವಾಸಿ ಮಾಡುವುದಾದರೆ ಅಲ್ಲೇ ಕೊಟ್ಟು ವಾಸಿ ಮಾಡುತ್ತೇವೆ. ಶಸ್ತ್ರ ಚಿಕಿತ್ಸೆ ಮಾಡಬೇಕಾದ ಸಂದರ್ಭಗಳು ಬಂದಾಗ ಬೆಂಗಳೂರಿನಂಥ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ರೋಗಿಗಳನ್ನು ಕರೆಸಿಕೊಂಡು ಚಿಕಿತ್ಸೆ ನೀಡುತ್ತೇವೆ. ಆಪರೇಷನ್ ಮಾಡತಕ್ಕ ಸಂದರ್ಭಗಳಲ್ಲಿ ಎಕ್ಸ್‌ಪರ್ಟ್ಸ್ ಬೇಕಾಗುತ್ತಾರೆ ಮತ್ತು ಯಂತ್ರೋಪಕರಣಗಳು ಬೇಕಾಗುತ್ತವೆ. ಅವನ್ನೆಲ್ಲ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗಳಲ್ಲೂ ಇಡುವುದಕ್ಕೆ ನಮ್ಮಲ್ಲಿ ಹಣ ಇಲ್ಲ. ಅಂಥ ಸಲಕರಣೆಗಳಿಗೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಮನಸ್ಸಿನಲ್ಲಿಟ್ಟು ರೋಗಿಯ ಪ್ರಾಣವನ್ನು ಉಳಿಸಬೇಕೆಂದರೆ ಬೆಂಗಳೂರಿನಂಥ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ರೋಗಿಯನ್ನು ಕರೆಸಿಕೊಳ್ಳಲೇಬೇಕಾಗುತ್ತದೆ. ಕಾರ್ಮಿಕರು ಅಂದಾಕ್ಷಣ ಇ.ಎಸ್.ಐ. ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡುತ್ತಾರೆಂದು ಅವರನ್ನು ಕೈಬಿಡುವುದಕ್ಕಿ ತಯಾರಿಲ್ಲ, ಅಥವಾ ಅಲ್ಲಿಗೆ ಎಲ್ಲ ಸಲಕರಣೆಗಳನ್ನು ಒದಗಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬ ಪ್ರಜೆಯ ಪ್ರಾಣವನ್ನು ರಕ್ಷಿಸಬೇಕಾದುದು ಸರ್ಕಾರದ ಕರ್ತವ್ಯ,

ಅದಕ್ಕೋಸ್ಕರ ಎಲ್ಲೆಲ್ಲಿ ಯಾವ ಯಾವ ಚಿಕಿತ್ಸಾ ಸೌಲಭ್ಯಗಳಿವೆಯೋ ಅಲ್ಲಿಗೆ ರೋಗಿಗಳನ್ನು ಕರೆದು ಕೊಂಡು ಹೋಗುತ್ತೇವೆ.

೧೦ ಎ.ಎಂ.

ಅಂದ ಮಾತ್ರಕ್ಕೆ ಅಲ್ಲಿ ಆಸ್ಪತ್ರೆ ಇಲ್ಲ ಎಂದು ಅರ್ಥವಲ್ಲ. ತಮ್ಮ ಗಮನಕ್ಕೆ ತರಬೇಕಾದರೆ ೧೯೫೭ರಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಟಿ. ಬಿ. ಆಸ್ಪತ್ರೆಗಳು ಇರಲಿಲ್ಲ. ಆದರೆ ನಂತರ ೧೯೭೦ರ ಹೋತ್ತಿಗೆ ೧೯ ಜಿಲ್ಲೆಗಳಲ್ಲೂ ೧೯ ಕ್ಷಯರೋಗದ ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆ. ಆದರೆ ಎಲ್ಲಾ ಕಡೆ ಸರ್ಜಿಕಲ್ ಟ್ರೀಟ್‌ಮೆಂಟ್ ಕೊಡುವುದಕ್ಕಾಗುವುದಿಲ್ಲ. ಬೇರೆ ರೀತಿಯ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಇದನ್ನು ಗಮನಿಸಿದಾಗ ಮಾನ್ಯ ಸದಸ್ಯರು ಏನು ಆತಂಕವನ್ನು ವ್ಯಕ್ತ ಮಾಡಿದ್ದರೋ ಅದು ಪರಿಹಾರ ವಾಗಿದೆ ಎಂದು ನಾನು ಭಾವಿಸುತ್ತೇನೆ. ಇ.ಎಸ್.ಐ. ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಮಾತನ್ನು ಹೇಳಿದರು. ಎಲ್ಲೆಲ್ಲಿ ಕಾರ್ಮಿಕರು ಹೆಚ್ಚಿಗೆ ಇದ್ದಾರೆ ಎಲ್ಲೆಲ್ಲಿ ಕಾರ್ಖಾನೆಗಳು ಹೆಚ್ಚಾಗಿ ನಿರ್ಮಾಣ ವಾಗುತ್ತಿವೆ,ಅಂಥ ಕಡೆಗಳಲ್ಲಿ ಇ ಎಸ್. ಐ. ಆಸ್ಪತ್ರೆಗಳನ್ನು ತೆರೆಯಬೇಕು ಎಂದು ಹೇಳಿದ್ದಾರೆ. ಇದು ಕೇಂದ್ರ ಸರ್ಕಾರದ ಯೋಜನೆ ಪ್ರಕಾರ ಆಗುವಂಥಾದ್ದು. ಇಷ್ಟು ಫ್ಯಾಕ್ಟರಿ ಇದ್ದೆಡೆ ಕಡ್ಡಾಯವಾಗಿ ಒಂದು ಆಸ್ಪತ್ರೆ ಇರಬೇಕೆಂಬ ನಿಯಮ ಇದೆ. ಕಾರ್ಮಿಕರ ಸಂಖ್ಯೆ ಹೆಚ್ಚಾಗಿದ್ದ ಕಡೆ ಅವರ ಆರೋಗ್ಯವನ್ನು ಕಾಪಾಡುವುದಕ್ಕೆ ಆಸ್ಪತ್ರೆಗಳನ್ನು ನಡೆಸುತ್ತಿರುವುದು ತಮಗೆ ಗೊತ್ತಿದೆ. ಪ್ರತಿನಿತ್ಯ ಕೈಗಾರಿಕೆಗಳು ಬೆಳೆಯುತ್ತಿವೆ. ಆದರೆ ಇ.ಎಸ್.ಐ. ಸೌಲಭ್ಯ ಒದಗಿಸಬೇಕಾದರೆ ಇ.ಎಸ್.ಐ. ಆಕ್ಟ್ ಪ್ರಕಾರವಾಗಿ ಒಪ್ಪಿಗೆ ತೆಗೆದುಕೊಳ್ಳಬೇಕು. ಮ್ಯಾನೇಜ್‌ಮೆಂಟಿನವರು ಕೆಲಸಗಾರರ ಒಪ್ಪಿಗೆ ತೆಗೆದು ಕೊಳ್ಳಬೇಕು. ಇಂತಿಷ್ಟು ಹಣ ಎಂದು ಸಂಬಳದಲ್ಲಿ ಹಿಡಿಯಬೇಕು. ಇದಲ್ಲಾ ಆಗಬೇಕಾಗಿರುವುದರಿಂದ ಕೆಲವು ಕಡೆ ಸ್ವಲ್ಪ ವಿಳಂಬವಾಗಿರಬಹುದು. ವಿಳಂಬವಾಗಿ ಕಾರ್ಮಿಕರ ಹಿತರಕ್ಷಣೆಗೆ ಧಕ್ಕೆಯಾಗಿರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಕಾನೂನು ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ವೈದ್ಯಕೀಯ ಸೌಲಭ್ಯದ ವಿಷಯದಲ್ಲಿ ಇಡೀ ದೇಶಕ್ಕೆ ಹೋಲಿಕೆ ಮಾಡಿದಾಗ ನಾವು ಮೇಲ್ಮಟ್ಟದಲ್ಲಿದ್ದೇವೆ ಎಂಬ ಮಾತನ್ನು ಹೇಳುವುದಕ್ಕೆ ತುಂಬಾ ಸಂತೋಷಪಡುತ್ತೇನೆ. ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕ್ಯಾನ್ಸರ್ ಇನ್ಸ್‌ಟಿಟ್ಯೂಟನ್ನು ಸ್ಥಾಪನೆ ಮಾಡಿದ್ದೇವೆ. ಪ್ರಪ್ರಥಮವಾಗಿ ನರ್ಸಿಂಗ್ ಕಾಲೇಜು ಕರ್ನಾಟಕದಲ್ಲಿ ಪ್ರಾರಂಭವಾಗಿದೆ. ಎಲ್ಲೆಲ್ಲಿ ಮೆಡಿಕಲ್ ಕಾಲೇಜುಗಳಿವೆ ಅಲ್ಲೆಲ್ಲಾ ನರ್ಸಿಂಗ್ ತರಬೇತಿ ಕೇಂದ್ರವನ್ನು ತೆರೆಯಲು ಅನುಮತಿ ಕೊಟ್ಟಿದ್ದೇವೆ. ಹಾಸಿಗೆಗಳ ಪ್ರಮಾಣಕ್ಕೆ ಮಿತಿ ಹಾಕಿಲ್ಲ. ಖಾಸಗಿ ಮೆಡಿಕಲ್ ಕಾಲೇಜುಗಳು ಅನೇಕ ಕಡೆಗಳಲ್ಲಿ ಇರುವುದರಿಂದ ಹೆಚ್ಚು ನರ್ಸ್‌ಗಳನ್ನು ತಯಾರು ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಇದರ ಕಡೆ ನಾವು ಗಮನ ಕೊಟ್ಟಿದ್ದೇವೆ. ಉದಾಹರಣೆಗೆ ಇಂಟರ್‌ನೀವ್ ವಾರ್ಡ್‌ಗೆ ಒಬ್ಬೊಬ್ಬರಂತೆ ದಾದಿಯರನ್ನು ಕೊಟ್ಟಿದ್ದೇವೆ. ಈ ಸೌಲಭ್ಯವನ್ನು ನೀಡಬೇಕಾದರೆ ಅದು ಖಾಯಿಲೆಯನ್ನೂ ಅವಲಂಬಿಸಿರುತ್ತದೆ. ಇಷ್ಟು ಹಾಸಿಗೆಗೆ ಒಂದು ನರ್ಸ್ ಇರಬೇಕೆಂಬ ನಿಯಮ ಏನಿದೆ ಅದಕ್ಕನುಗುಣವಾಗಿ All India Average Standard ಪ್ರಕಾರ ನೀಡಿದ್ದೇವೆ. ಎಂಥ್ಯೆ ಯಾವಾಗಲಾದರೂ ಯಾರಾದರೊಬ್ಬರು ಕ್ಯಾಷುಯಲ್ ರಜಾ ತೆಗೆದುಕೊಂಡರೆ ಆಗ ಸ್ವಲ್ಪ ಅನಾನುಕೂಲವಾಗಬಹುದು. ಅದೇನೂ ದೊಡ್ಡ ವಿಷಯವಲ್ಲ. ಆದರೆ ಅದನ್ನೂ ಕೂಡ ಸರಿಪಡಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಮಾನ್ಯ ಸದಸ್ಯರಾದ ಪಂಪಾಪತಿ ಮತ್ತು ಗಂಗಾಧರನ್ ಅವರು ಕುಷ್ಟರೋಗ ನಿವಾರಣೆ ಬಗ್ಗೆ ಹೆಚ್ಚು ಒತ್ತಾಯ ಮಾಡಿ ಹೇಳಿದರು. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಜಂಟಿಯಾಗಿ ಈ ಖಾಯಿಲೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ. ಕುಷ್ಟರೋಗ ಅಂಟುರೋಗವೇನೂ ಅಲ್ಲ. ಆದರೆ ಅಂಟುರೋಗ ಎಂಬ ಭಯ ಜನರಲ್ಲಿದೆ. ಈ ಬಗ್ಗೆ ಅನೇಕ ಸಂಶೋಧನೆಗಳು ನಡೆದಿದೆ. ಸಂಶೋಧನೆ ನಡಸಿ ಇದನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಂಡು ಎಸ್.ಇ.ಟಿ.ಸೆಂಟರ್‌ಗಳನ್ನು ಮಾಡಿದ್ದೇವೆ. ಎಸ್.ಇ.ಟಿ. ಸೆಂಟರ್ ಎಂದರೆ Survey Education Training Centre. ಎಲ್ಲೆಲ್ಲಿ ಈ ಖಾಯಿಲೆ ಹೆಚ್ಚಾಗಿದೆ ಅದು ಜಿಲ್ಲಾಮಟ್ಟದಲ್ಲಿರಬಹುದು, ತಾಲ್ಲೂಕು ಮಟ್ಟದಲ್ಲಿರಬಹುದು ಅಥವಾ ಗ್ರಾಮ ಮಟ್ಟದಲ್ಲೆರಬಹುದು ಅಂಥ ಕಡೆಗಳಲ್ಲಿ ಇದನ್ನು ತಡೆಗಟ್ಟಲು ಅನುಕೂಲವಾಗುವಂತೆ ಕೇಂದ್ರ

ಗಳನ್ನು ತೆರೆಯಲಾಗಿದೆ. ಅಲ್ಲಿ ರೋಗಿಗಳಿಗೆ ಮಾತ್ರೆ ನುಂಗಿಸುವುದು ಮತ್ತು ಆವರನ್ನು ಚೊಕ್ಕಟವಾಗಿಡುವುದು ಈ ಕೆಲಸವನ್ನು ಬಿಟ್ಟರೆ ಬೇರೇನೂ ಚಿಕಿತ್ಸೆ ನೀಡುವುದಿಲ್ಲ. ಅಂಗವಿಕಲರಾಗಿದ್ದರೆ ಅದಕ್ಕೂ ಕೂಡ ಸರ್ಜಿಕಲ್ ಸೆಂಟರ್‌ಗಳನ್ನು ತೆರೆದು ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಕುಷ್ಠರೋಗ ನಿವಾರಣೆಗೆ ತೀವ್ರವಾದ ಪ್ರಯತ್ನ ಮಾಡಲಾಗುತ್ತಿದೆ. ಯಾವುದೇ ತಾಲ್ಲೂಕಿನಲ್ಲಿ ಅಥವಾ ಗ್ರಾಮದಲ್ಲಿ ಈ ಖಾಯಿಲೆಯಿಂದ ನರಳುತ್ತಿದ್ದರೆ ಅದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅಂಥ ಕಡೆ ಎಸ್. ಟಿ. ಸೆಂಟರ್ ತೆರೆಯುವುದಕ್ಕೆ ಸರ್ಕಾರ ಸಿದ್ಧವಿದೆ ಎಂದು ಘೋಷಣೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆದರೆ ಈ ರೋಗವನ್ನು ನಿವಾರಣೆ ಮಾಡಬೇಕಾದರೆ ಎಲ್ಲರ ಸಹಕಾರ ಅಗತ್ಯವಾಗಿ ಬೇಕಾಗುತ್ತದೆ. ಸಮಾಜ ಸೇವಾ ಸಂಸ್ಥೆಗಳು, ಜನಸಾಮಾನ್ಯರು ವೈದ್ಯರು ಎಲ್ಲರ ಸಹಕಾರವೂ ಬೇಕಾಗುತ್ತದೆ. ಮಾತ್ರೆಗಳನ್ನು ಸತತವಾಗಿ ಉಪಯೋಗಿಸತಕ್ಕ ಅಭ್ಯಾಸವನ್ನು ಮಾಡಿಸಿದರೆ ಇದನ್ನು ತಡೆಗಟ್ಟಬಹುದು. ಇದಕ್ಕೆ ತಗಲತಕ್ಕ ಖರ್ಚು ಅತ್ಯಲ್ಪ. ಈ ದಿಸೆಯಲ್ಲಿ ಸಮಾಜ ಸೇವಾ ಸಂಸ್ಥೆಗಳು ಸಮಾಜಸೇವಕರು, ಜನ ಸಾಮಾನ್ಯರು ಹೆಚ್ಚಿನ ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಬೇಕಾದುದು ಮುಖ್ಯ. ಈ ಬಗ್ಗೆ ಇವರುಗಳು ಕ್ರಮ ತೆಗೆದುಕೊಳ್ಳಬೇಕು. ಈ ದಿಸೆಯಲ್ಲಿ ಸರ್ಕಾರವೂ ದಿಟ್ಟವಾದ ಹೆಜ್ಜೆಯನ್ನಿಡುತ್ತಿದೆ. ಇನ್ನು ಸ್ಯಾನಿಟೋರಿಯ ವಿಚಾರಧಲ್ಲಿ ಹೇಳುವುದಾದರೆ ಎಲ್ಲ ಜಿಲ್ಲೆಗಳಲ್ಲೂ ಈ ವ್ಯವಸ್ಥೆ ಇಟ್ಟಿದ್ದೇವೆ. ಪ್ರತ್ಯೇಕವಾದ ಆಸ್ಪತ್ರೆ ಇದಕ್ಕೆ ಇಲ್ಲದಿದ್ದರೂ ಕೂಡ ಕೆಲವಾರು ಹಾಸಿಗೆಗಳನ್ನು ದೊಡ್ಡ ಆಸ್ಪತ್ರೆಯಲ್ಲಿ ರಿಸರ್ವ್ ಮಾಡಿದ್ದೇವೆ. ಇದು ಸಾಮಾನ್ಯವಾಗಿ ಬಡವರಿಗೆ ಬರತಕ್ಕ ಖಾಯಿಲೆ. ಇದಕ್ಕೆ ಮುಖ್ಯ ಕಾರಣವೆಂದರೆ under nourishment. ಆರ್ಥಿಕ ಪ್ರಗತಿಯಾಗಿ ಜನಜೀವನಮಟ್ಟ ಉತ್ತಮವಾದಾಗ ಮಾತ್ರ ಇದನ್ನು ಮಟ್ಟುಗೋಲು ಹಾಕಬಹುದು. ಇದನ್ನು ಬರೀ ಔಷಧದಿಂದ ನಿರ್ಮೂಲನ ಮಾಡುವುದಕ್ಕಾಗುವುದಿಲ್ಲ ಇದ ಬಡತನದಿಂದ ಬರತಕ್ಕ ಖಾಯಿಲೆಯಾದ್ದರಿಂದ ಇದರ ಬಗ್ಗೆ ಹೆಚ್ಚಿನ ಹೋರಾಟ ಮಾಡಬೇಕು. ಹಾಸಿಗೆಗಳ ಸಂಖ್ಯೆ All India average 1000:1— ಎಂದು ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳಿದರು. ಆ ವರ್ಗವನ್ನು ಕರ್ನಾಟಕ ರಾಜ್ಯ ಮುಟ್ಟಿದೆ. ಇವತ್ತು ನಮ್ಮ ರಾಜ್ಯದಲ್ಲಿ ೮೦೦ ಜನರಿಗೆ ಒಂದು ಹಾಸಿಗೆಯಂತೆ ಸೌಲಭ್ಯ ಇದೆ. ಮೆಡಿಕಲ್ ಕಾಲೇಜುಗಳು ಹೆಚ್ಚಾದಂತೆ ಹಾಸಿಗೆಗಳ ಸಂಖ್ಯೆಗಳೂ ಹೆಚ್ಚಾಗಿವೆ. ರೋಗಿಗಳಿಗನುಸಾರವಾಗಿ ಹಾಸಿಗೆಗಳ ಸಂಖ್ಯೆಯನ್ನು ಲೆಕ್ಕಹಾಕಿದರೆ ನಾವು ಭಾರತದಲ್ಲೇ ಪ್ರಥಮ ಸ್ಥಾನಕ್ಕೆ ಬರುತ್ತೇವೆ.

ಶ್ರೀ ಪಿ. ರಾಮದೇವ್.—೮೦೦ ಜನರಿಗೆ ಒಂದು ಹಾಸಿಗೆ ಸೌಲಭ್ಯ ಇದೆ ಎಂದು ತಾವು ಹೇಳಿದಿರಿ

ಶ್ರೀ ವೈ. ರಾಮಕೃಷ್ಣ.—ಸುಮಾರು ೮೦೦ ಜನ ಎಂದು ಇಟ್ಟುಕೊಳ್ಳಿ.

ಶ್ರೀ ಪಿ. ರಾಮದೇವ್.—ನಮ್ಮಲ್ಲಿ ೩೪,೭೫೪ ಹಾಸಿಗೆಗಳಿವೆ. ಆದರೆ ಜನಸಂಖ್ಯೆ ಮೂರೂ ಮುಕ್ಕಾಲು ಕೋಟಿ ಇದ್ದರೆ ೮೦೦:೧ ಹೇಗಾಗುತ್ತದೆ.?

ಶ್ರೀ ವೈ. ರಾಮಕೃಷ್ಣ.—ಸರ್ಕಾರಿ ಆಸ್ಪತ್ರೆಗಳನ್ನು ಮಾತ್ರ ಲೆಕ್ಕಹಾಕಿ ಹೇಳಿಲ್ಲ. ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆ ಎರಡನ್ನು ಸೇರಿಸಿ ಸುಮಾರು ಅಷ್ಟಾಗಬಹುದು ಎಂದು ಹೇಳುತ್ತಿದ್ದೇನೆ.

ಶ್ರೀ ಪಿ. ರಾಮದೇವ್.—೪ ಕೋಟಿ ಪ್ರಜಾಸಂಖ್ಯೆ ಇದ್ದು ೩೪ ಸಾವಿರ ಹಾಸಿಗೆಗಳ ಸೌಲಭ್ಯ ಇರುವಾಗ ೮೦೦ ಎಂದು ಹೇಳಿದರೆ ಅದು ಸರಿಯಾದ ಅಂಕಿಅಂಶ ಅಲ್ಲ.

ಶ್ರೀ ವೈ. ರಾಮಕೃಷ್ಣ.—ಮೊದಲು ೯೦೦ ಚಿಲ್ಲರೆ ಇತ್ತು. ಈಗ ಮೆಡಿಕಲ್ ಕಾಲೇಜುಗಳು ಬಂದಮೇಲೆ ಅದು ೮೦೦ಕ್ಕೆ ಇಳಿದಿರಬಹುದು ಎಂದು ಅಂದಾಜಿನ ಮೇಲೆ ಹೇಳಿದೆ. ನಿಮಗೆ ಸರಿಯಾದ ಮಾಹಿತಿ ಬೇಕಾದರೆ ಅಂಕಿಅಂಶಗಳ ಸಮೇತ ಒದಗಿಸಿ ಕೊಡುತ್ತೇನೆ.

ಶ್ರೀ ಪಿ. ರಾಮದೇವ್.—ಸರ್ಕಾರದ ಪರವಾಗಿ ನೀವು ಉತ್ತರ ಕೊಡುವಾಗ ಸರಿಯಾದ ಅಂಕಿ ಅಂಶಗಳನ್ನು ಹೇಳಬೇಕು. ನೀವು ಹೀಗೆ ಉತ್ತರ ಕೊಡುತ್ತೀರೆಂತಲೇ ಮಾನ್ಯ ಲಕ್ಷ್ಮೀಸಾಗರ್ ಅವರು ಅದನ್ನು ಕ್ವಾಷುಯಲ್ ರಿಪ್ಲೈ ಎಂದು ಹೇಳಿದರು.

ಶ್ರೀ ವೈ. ರಾಮಕೃಷ್ಣ.—ಆಸ್ಪತ್ರೆಗಳಲ್ಲಿ ಔಷಧಿಗಳು ಸಾಲದು ಎಂಬ ವಿಚಾರವನ್ನು ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳಿದರು. ಈ ಮಾನ್ಯ ಸಭೆ ಎಷ್ಟು ಹಣವನ್ನು ಮಂಜೂರು ಮಾಡುತ್ತದೋ ಅಷ್ಟು ಹಣವನ್ನೆಲ್ಲಾ ಔಷಧಿಗಾಗಿ ಉಪಯೋಗಿಸುತ್ತಿದ್ದೇವೆ. ನಮ್ಮ ಹಾಣಕಾಸಿನ ವ್ಯವಸ್ಥೆ ಅಷ್ಟು ಸಮರ್ಪಕವಾಗಿಲ್ಲ. ಅದನ್ನನುಸರಿಸಿ ನಾವು ಔಷಧಿಯನ್ನು ಕೊಡುತ್ತಿದ್ದೇವೆ.

ಇನ್ನೂ ಹೆಚ್ಚಿಗೆ ಹಣ ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ. ಹಣ ಇಲ್ಲ, ಔಷಧಿ ಇಲ್ಲ ಎಂದು ಜನರಿಗೆ ತೊಂದರೆ ಮಾಡುವುದಿಲ್ಲವೆಂಬ ಆಶ್ವಾಸನೆಯನ್ನು ಸಭೆಗೆ ಕೊಡುತ್ತೇನೆ. ಈಗ ಕರ್ನಾಟಕದಲ್ಲಿ ಎಲ್ಲ ತಾಲ್ಲೂಕುಗಳಲ್ಲಿ ಪಿ.ಹೆಚ್.ಇ. ಸೆಂಟರ್ಸ್ ಕೆಲಸ ನಿರ್ವಹಿಸುತ್ತಿವೆ, ಹಾಗೂ ಎಲ್. ಎಫ್. ಡಿಸ್ಪೆನ್ಸರಿಗಳೂ ಕೆಲಸ ಮಾಡುತ್ತಿವೆ. ಪಿ.ಹೆಚ್.ಇ. ಇಲ್ಲದೇ ಇರುವ ಕಡೆಗಳಲ್ಲಿ ಎಲ್. ಎಫ್. ಡಿಸ್‌ಪೆನ್ಸರಿಗಳು ಕೆಲಸ ಮಾಡುತ್ತಿವೆ. ಎರಡೂ ಇಲ್ಲದೇ ಇರುವಂಥ ತಾಲ್ಲೂಕುಗಳೂ ಇಲ್ಲ. ಒಂದುವೇಳೆ ಅಂಥದ್ದೇನಾದರೂ ಇದ್ದರೆ ಮಾನ್ಯ ಸದಸ್ಯರು ತಿಳಿಸಿದರೆ ಅಂಥ ಕಡೆ ಆಸ್ಪತ್ರೆ ಕೊಡುವುದಕ್ಕೆ ತಯಾರಿದ್ದೇವೆ. ಅವರ ಕ್ಷೇತ್ರಗಳಲ್ಲಿ ಎಲ್ಲಾದರೂ ಎರಡು ಸೌಲಭ್ಯ ಇಲ್ಲದಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ನಾವು ಆಸ್ಪತ್ರೆ ಕೊಡುವುದಕ್ಕೆ ತಯಾರಾಗಿದ್ದೇವೆ.

ಇದರ ಜೊತೆಗೆ ನಾವು ಸಬ್ ಸೆಂಟರ್ಸ್‌ಗಳನ್ನು ಕೊಟ್ಟಿದ್ದೇವೆ. ಇವು ಕುಟುಂಬ ಯೋಜನೆಗೆ ಸಂಬಂಧಪಟ್ಟದ್ದಾಗಿವೆ. ಇವು ನೂರಾರು ಸಂಖ್ಯೆಯಲ್ಲಿ ಕೆಲಸ ಮಾಡುತ್ತಿವೆ. ಇವುಗಳ ಅವಶ್ಯಕತೆ ಇನ್ನೂ ಇದ್ದರೆ ಅವನ್ನೂ ಸಹಾ ಕೊಡುತ್ತೇವೆ. ಆದರೆ ಜಿಲ್ಲಾ ಆಸ್ಪತ್ರೆಗಳಲ್ಲಿ ಮಾತ್ರ ಈ ದಿನ ಏನೇನು ವಿಶೇಷ ಸೌಲಭ್ಯಗಳು ಎಂದರೆ ಕಣ್ಣಿನ ಚಿಕಿತ್ಸೆ, ಹಲ್ಲಿನ ರೋಗಕ್ಕೆ ಚಿಕಿತ್ಸೆ, ಹೃದಯಕ್ಕೆ ಸಂಬಂಧಪಟ್ಟ ಚಿಕಿತ್ಸೆಗಳಿಗೆ ಏನೇನು ವಿಶೇಷ ಸೌಲಭ್ಯಗಳು ಬೇಕೋ ಅವನ್ನೆಲ್ಲಾ ಈ ದಿನ ಜಿಲ್ಲಾ ಮಟ್ಟದಲ್ಲಿ ನಾವು ಇಟ್ಟಿದ್ದೇವೆ. ಈ ವಿಶೇಷ ಸೌಲಭ್ಯ ಬೆಂಗಳೂರು ಬಿಟ್ಟು ಬೇರೆ ಕಡೆಗಳಲ್ಲಿ ಇಲ್ಲ ಎನ್ನುವ ಭಯ ಬೇಡ ನಮ್ಮ ರಾಜ್ಯ ಮಟ್ಟದ ಬಗ್ಗೆ ಹೇಳುವುದಾದರೆ, ಬೆಂಗಳೂರಿನಲ್ಲಿ "ನಿಮ್‌ಹಾನ್ಸ್" ಇದೆ. ಇದು ನರಗಳಿಗೆ ಸಂಬಂಧಪಟ್ಟದ್ದು. ಇದು ಭಾರತ ದೇಶದಲ್ಲಿಯೇ ಪ್ರಖ್ಯಾತಿ ಪಡೆದಂತಹ ಸಂಸ್ಥೆಯಾಗಿದೆ. ಹಾಗೆಯೇ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಇದೆ. ಟಿ.ಬಿ. ಸ್ಯಾನಿಟೋರಿಯಮ್ ಇದೆ, ಇ.ಎನ್.ಟಿ. ಇನ್‌ಸ್ಟಿಟ್ಯೂಟ್ ಮುಂತಾದ ವಿಶೇಷ ಸಂಸ್ಥೆಗಳು ಪ್ರತ್ಯೇಕ ಖಾಯಿಲೆಗಳಿಗಾಗಿ ತೆರೆದಿವೆ. ಆದರೂ ಕೂಡ ನಮಗೆ ತೃಪ್ತಿಕರ ಆಗಿದೆಯೆಂದು ಹೇಳಿ ಏನು ಒಂದು ರೆಸಲ್ಯೂಷನ್ನನ್ನು ಮಾನ್ಯ ಸದಸ್ಯರು ರಾಜ್ಯದ ಜನತೆಗೆ ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಕೇಳಿದ್ದಾರೆ ಅದನ್ನು ಗೋಲಾಗಿ ಇಟ್ಟುಕೊಂಡು ನಾವು ದುಡಿಯುತ್ತೇವೆಂದು ಹೇಳಿ, ಆ ದಿಸೆಯಲ್ಲಿ ಗುರಿಯನ್ನು ಮುಟ್ಟುತ್ತೇವೆಂದು ಹೇಳಿ, ನಿಮ್ಮ ಗುರಿ ಹಾಗು ನಮ್ಮ ಗುರಿ ಒಂದೇ ಆಗಿರುವುದರಿಂದ, ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ ವಾದ್ದರಿಂದ ಮಾನ್ಯ ಸದಸ್ಯರು ಏನು ಮಂಡಿಸಿದ್ದಾರೆ ಆ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಿ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಕೃಷ್ಣ ಅವರಂ ಸರ್ಕಾರದ ಪರವಾಗಿ ಉತ್ತರ ಕೊಡುತ್ತಾ ತತ್ವಶಃ ನಿರ್ಣಯವನ್ನು ಒಪ್ಪಿದ್ದೇವೆ, ಆದರೆ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ವಿರೋಧಾಬಾಸದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.—ಈ ದಿಸೆಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

SRI Y. RAMAKRISHNA.—Principally we have agreed to it. Both of us are working towards that end.

ಶ್ರೀ ಪಿ. ರಾಮದೇವ್.—ಇದನು ಒಪ್ಪಿಕೊಳ್ಳುವುದರಲ್ಲಿ ಏನು ತೊಂದರೆ ಆಗುತ್ತದೆ ಎಂದು ಗೊತ್ತಿಲ್ಲ. ಈ ನಿರ್ಣಯದಲ್ಲಿ ಹೇಳಿರುವ ಪ್ರಕಾರ ತಮ್ಮ ಸರ್ಕಾರ ಕೆಲಸ ಮಾಡುತ್ತಿರುವಾಗ ಈ ಒಂದು ನಿರ್ಣಯ ಸಾದಕವಾಗುತ್ತದೆಯೇ ಹೊರತು ಬಾಧಕವಾಗುವುದಿಲ್ಲ. It is only complimentary to the Government. ಇದನ್ನು ಒಪ್ಪಿಕೊಳ್ಳುವುದಾದರೆ ಭಾದಕವೇನು ಆಗುತ್ತದೆ?

ಶ್ರೀ ವೈ. ರಾಮಕೃಷ್ಣ.— ಬಾದಕ ಏನೂ ಇಲ್ಲ. ಇದನ್ನು ಮೂವ್ ಮಾಡಿ ಓಟಿಗೆ ಏಕೆ ಹಾಕ ಬೇಕು? ಇದು ದೇಶಕ್ಕೆ ಸಂಬಂಧಪಟ್ಟ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯವಾಗಿದ್ದು ಇದನ್ನು ತತ್ವಶಃ ಒಪ್ಪಿಕೊಳ್ಳಲಾಗಿದೆ. You have to appreciate the spirit with which I am accepting your resolution in principle.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದುವರೆವಿಗೂ ಸರ್ಕಾರ ಅನೇಕ ವಿಚಾರಗಳನ್ನು ಒಪ್ಪಿಕೊಂಡಿದ್ದು, ಅವುಗಳನ್ನು ಕಾರ್ಯಗತ ಮಾಡಿಲ್ಲ. ಆದೇ ರೀತಿ ಇದನ್ನೂ ಸರ್ಕಾರ ಒಪ್ಪಿಕೊಳ್ಳಲಿ, ಕಾರ್ಯಗತ ಮಾಡುವುದು ಅಥವಾ ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು ಎಂದು ಮಾನ್ಯ ರಾಮ್‌ದೇವ್ ಅವರು ಹೇಳುತ್ತಿದ್ದಾರೆ.

ಶ್ರೀ ಪಿ. ರಾಮ್‌ದೇವ್.—ಈ ನಿರ್ಣಯ ಒಳ್ಳೆಯದಿದ್ದರೂ ಕೂಡ, ಇದು ವಿರೋಧ ಪಕ್ಷದವರ ಕಡೆಯಿಂದ ಬಂದಿರತಕ್ಕಂತಹದ್ದಾದ್ದರಿಂದ ಇದನ್ನು ಒಪ್ಪಿಕೊಳ್ಳಬಾರದು ಎನ್ನುವ ದೃಷ್ಟಿ ಸರ್ಕಾರಕ್ಕಿರಬಹುದು. Otherwise it is a very simple resolution.

SRI Y. RAMAKRISHNA.—Even if it had come from this side, I would have said like this only.

SRI P. RAMDEV.—It is a very simple resolution. ಸರ್ಕಾರ ಕೆಲಸ ಮಾಡುತ್ತದೆಂದು ಮಾನ್ಯ ಸಚಿವರು ಹೇಳುತ್ತಾರೆ. ನಾವು ಆದನ್ನು ಇಲ್ಲ ಎಂದು ಹೇಳುವುದಿಲ್ಲ. ಆದುದರಿಂದ ಈ ನಿರ್ಣಯವನ್ನು ಮಂಡಿಸಿದ್ದರೆ ಚೆನ್ನಾಗಿ ಇತ್ತು. ಆದರೆ ಯಾವುದೋ ಒಂದು ಹಿನ್ನೆಲೆಯಲ್ಲಿ ಸರ್ಕಾರ ಇದನ್ನು ಒಪ್ಪಿಕೊಳ್ಳುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಮಾತನಾಡುವಾಗ ರಾಜ್ಯಾಂಗದ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ಇದು ರಾಜ್ಯದ ಜವಾಬ್ದಾರಿ ಎಂದು...

ಶ್ರೀ ವೈ. ರಾಮಕೃಷ್ಣ.—ನಾನು ಹೇಳಿದ್ದೇನಲ್ಲಾ. I have accepted it.

ಶ್ರೀ ಪಿ. ರಾಮದೇವ್.—ರಾಜ್ಯದ ಹಣಕಾಸಿನ ಪರಿಸ್ಥಿತಿ ನೋಡಿ, ಉಚಿತ ವೈದ್ಯಕೀಯ ಚಿಕಿತ್ಸೆ, ಹಾಗೂ ಸಲಹೆ ಮಾಡತಕ್ಕ ಜವಾಬ್ದಾರಿ ಸರ್ಕಾರದಲ್ಲಿ ಇದೆ. ಈ ಹಿನ್ನೆಲೆಯಲ್ಲಿ ತಮ್ಮ ಸರ್ಕಾರದ ನೀತಿ ಏನು ಎಂದು ನಾನು ಕೇಳುತ್ತಿದ್ದೇನೆ. ಸರ್ಕಾರದ ನೀತಿಯನ್ನು ಪ್ರಕಟಣೆ ಮಾಡಬೇಕಾಗಿದೆ, ಈ ಹಿನ್ನೆಲೆಯಲ್ಲಿ ಸರ್ಕಾರ ಇನ್ನು ಒಂದು ವರ್ಷದಲ್ಲಿ, ಅಥವಾ ೫ ವರ್ಷದಲ್ಲಿ ಇದನ್ನು ಸಾಧಿಸುತ್ತೇವೆಂದು ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ವೈ. ರಾಮಕೃಷ್ಣ.—ಆ ನೀತಿಯನ್ನು ಅನುಸರಿಸಿ ಹೇಳಬೇಕೆಂದರೆ, ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಹಳ್ಳಿ ಮಟ್ಟದಲ್ಲಿಯು ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದೇವೆ. ಎಲ್ಲಾ ಸೌಲಭ್ಯಗಳೂ ಡೀಸೆಂಟ್ರಲೈಸೇಷನ್ ಆಗಿ ಅವುಗಳು ಗ್ರಾಮಾಂತರ ಮಟ್ಟ ಮುಟ್ಟಬೇಕು ಎಂದು ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಅವುಗಳನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. We are prepared to concede your request.

ಪಿ. ರಾಮ್‌ದೇವ್.—ತಾವು ಸಾಂದರ್ಭಿಕವಾಗಿ ಹೇಳಿದ್ದೆಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದರು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬ್ರಿಟನ್ ದೇಶದಲ್ಲಿ ಒಂದು ನೀತಿಯನ್ನು ಒಂದು ತತ್ವವನ್ನು ಪ್ರತಿಪಾದನೆ ಮಾಡಿದ್ದಾರೆ. ಆ ರಾಷ್ಟ್ರದಲ್ಲಿ ಆಲ್ಲಿಗೆ ಸಂಬಂಧಪಟ್ಟ ಖಾಯಿಲೆಗಳನ್ನು ಬಿಟ್ಟು ಬೇರೆಲ್ಲಾ ರೋಗಗಳಿಗೂ ಉಚಿತ ವೈದ್ಯಕೀಯ ಚಿಕಿತ್ಸೆಕೊಡುವ ಜವಾಬ್ದಾರಿ ಆಲ್ಲಿನ ಸರ್ಕಾರಕ್ಕೆ ಇದೆ. ಅಲ್ಲಿ ನ್ಯಾಷನಲ್ ಹೆಲ್ತ್ ಸ್ಕೀಮ್ ಮಾಡಿದ್ದಾರೆ. ಆ ಸ್ಕೀಮನ್ನು ಅನುಷ್ಟಾನಕ್ಕೆ ತಂದಿದ್ದಾರೆ. ತಾವು ಈ ರೀತಿ ಏನಾದರೂ ಮಾಡಿದ್ದೀರಾ?

ಶ್ರೀ ವೈ. ರಾಮಕೃಷ್ಣ.—ಇ.ಎಸ್.ಐ. ಇದೆಯಲ್ಲಾ?

ಶ್ರೀ ಪಿ. ರಾಮ್‌ದೇವ್.—ಇ.ಎಸ್.ಐ. ಕೇಂದ್ರ ಸರ್ಕಾರದ್ದು. ಹಾಗೂ ಇದು ಕಾರ್ಮಿಕರ ಹಿತರಕ್ಷಣೆಗೆ ಸೀಮಿತವಾದದ್ದಾಗಿದೆ. ಈ ರಾಜ್ಯದ ಎಲ್ಲಾ ಜನತೆಗೆ ಅನ್ವಯಿಸತಕ್ಕ ನೀತಿಯನ್ನು ಪ್ರತಿಪಾದನೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಕಡ್ಡಾಯ ಪ್ರೈಮರಿ ವಿದ್ಯಾಭ್ಯಾಸವನ್ನು ತಂದು ೫ ವರ್ಷಗಳಲ್ಲಿ ಗುರಿ ಮುಟ್ಟುತ್ತೇವೆಂದು ಹೇಳುತ್ತಿದ್ದೀರಿ. ಆದೇ ರೀತಿ ನಮ್ಮ ರಾಜ್ಯದಲ್ಲಿರತಕ್ಕ ನಾಲ್ಕು ಕೋಟಿ ಜನತೆಗೆ ಉಚಿತ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಾ ಇಲ್ಲದಿರುವುದನ್ನೂ ಗಮನಿಸಬೇಕು. ಇದಕ್ಕೆ ಹಣ ಸಾಲದೆ ಬರುತ್ತದೆಂದು ಹೇಳುತ್ತಿದ್ದೀರಿ. ಈ ಹಣ ಯಾವಾಗ ಬರುತ್ತದೆ? ೧೯೪೭ರಿಂದ ಇಲ್ಲಿಯವರೆಗೆ ಬಂದ ಎಲ್ಲಾ ಸರ್ಕಾರಗಳು ನಮಗೆ ಈ ಬಗ್ಗೆ ಆಸೆ ಇದೆ ಆದರೆ ಹಣದ

ತೊಂದರೆಯೂ ಇದೆ ಎಂದು ಹೇಳಿಕೊಂಡು ಬರುತ್ತಿವೆ. ಸ್ವಾತಂತ್ರ್ಯ ಬಂದು ೩೫ ವರ್ಷಗಳಾದರೂ ಸಹಾ ಇದೇ ಉತ್ತರವನ್ನು ಸರ್ಕಾರ ಹೇಳಿಕೊಂಡು ಬರುತ್ತಿದೆ. ರಾಜ್ಯದ ಎಲ್ಲ ಜನತೆಗೆ ಉಚಿತ ವೈದ್ಯಕೀಯ ಚಿಕಿತ್ಸೆ ಕೊಡುವುದು ಯಾವಾಗ? ಇದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದರು ಅದನ್ನು ಆದರ್ಶವಾಗಿಟ್ಟುಕೊಂಡು ಸರ್ಕಾರ ಕೆಲಸ ಮಾಡುತ್ತದೆ. ಹಿಂದೆ ಮನುಷ್ಯನ ಸರಾಸರಿ ವಯಸ್ಸು ೨೭ ಇದ್ದದ್ದು ಈಗ ಎಷ್ಟು ಆಗಿದೆ ಎಂಬುದನ್ನು ಮಾನ್ಯ ಸದಸ್ಯರು ನೋಡಿದ್ದಾರೆಯೇ? ಇವತ್ತು ದೇಶದಲ್ಲಿ ಸಾಂಕ್ರಾಮಿಕ ರೋಗಗಳು ಮರೆಯಾಗಿವೆ. ಸಿಡುಬು, ಪ್ಲೇಗ್, ಮಲೇರಿಯಾ all these dreadful diseases have been eradicated and a man lives upto 60 years. Why? ಇದಕ್ಕೋಸ್ಕರವಾಗಿ ಸರ್ಕಾರ ದುಡಿದಿದೆ. ಇದಕ್ಕೆಲ್ಲಾ ಕಾರಣ ಏನು? ಇದರಿಂದಾಗಿ ನಾವು ನಿರೀಕ್ಷಿಸಿದ ಫಲ ದೊರೆತು ಆಶಾಕಿರಣ ಮೂಡುತ್ತಿದೆ. ಆದಷ್ಟು ಶೀಘ್ರವಾಗಿ ನಮ್ಮ ನಿಮ್ಮ ಆಸೆ ಈಡೇರುವ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಮಂತ್ರಿಗಳು ಏನು ಲೈಫ್ ಎಕ್ಸ್‌ಪೆಕ್ಟೆನ್ಸಿ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ, ಅದು ಸರ್ಕಾರದ ಪ್ರಯತ್ನದಿಂದ ಆದುದಲ್ಲ. ಅಂತಹ ಖಾಯಿಲೆಗಳನ್ನು ಹೋಗಲಾಡಿಸತಕ್ಕಂತಹ ರೋಗನಿರೋಧಕ ಔಷಧಗಳನ್ನು ಕಂಡು ಹಿಡಿದ ಸಂಶೋಧಕರು ಹಾಗೂ ವಿಜ್ಞಾನಿಗಳಿಗೆ ಆ ಕ್ರೆಡಿಟ್ ಹೋಗುತ್ತದೆ. ಇದು ಸರ್ಕಾರದ ಸಾಧನೆಯಲ್ಲ. Life expectancy is not because of the Government. It is only because of the medicines that are found and made available. ಆದುದರಿಂದ ನಾನಂ ಕೇಳುತ್ತಿರುವುದು.

ಶ್ರೀ ವೈ. ರಾಮಕೃಷ್ಣ.—Who met the research expenses?

SRI P. RAMDEV.—Private!

SRI Y. RAMAKRISHNA.—Impossible.

SRI P. RAMDEV.—We get most of the medicines from America and other western countries. ಇವರೇನೂ ಹೊಸದಾಗಿ ಮಾಡಿದ್ದಲ್ಲ. ನಾನು ತಮಗೆ ಕೇಳಿಕೊಳ್ಳುವುದೇನೆಂದರೆ, ಸರ್ಕಾರ ಈ ಬಗ್ಗೆ ನಿರ್ದಿಷ್ಟವಾದ ಪ್ರಕಟಣೆ ಮಾಡಿಲ್ಲ ಎಂಬುದು. ತಮ್ಮ ಎರಡು ವರ್ಷದ ಆಡಳಿತದಲ್ಲಿ ಅಥವಾ ೩೫ ವರ್ಷಗಳ ಆಡಳಿತದಲ್ಲಿ ಯಾವ ಒಂದು ನಿರ್ದಿಷ್ಟವಾದ ನೀತಿಯಂನ್ನು ಪ್ರತಿಪಾದನೆ ಮಾಡದೇ ಇರತಕ್ಕದ್ದು ಸರಿಯಲ್ಲವೆಂದೆನಿಸುತ್ತದೆ. ಅಮೆರಿಕಾದಲ್ಲಿ ನ್ಯಾಷನಲ್ ಹೆಲ್ತ್ ಇನ್‌ಷೂರೆನ್ಸ್ ಇದೆ. ಅಲ್ಲಿ ಪ್ರತಿಯೊಬ್ಬರೂ ಇನ್‌ಷೂರ್ ಮಾಡುತ್ತಾರೆ. They get free medical treatment. ಇವತ್ತು ಏನಾಗಿದೆಯೆಂದರೆ, ನಿಮಗೇನೋ ಹಣ ಇದೆ, ನೀವು ಹಣವಂತರು ನೀವು ಹಣ ಕೊಟ್ಟು ಚಿಕಿತ್ಸೆ ಪಡೆದುಕೊಳ್ಳುವ ಅವಕಾಶ ಇದೆ. ಇವತ್ತು ಬಡಜನತೆಗೆ, ಮಧ್ಯಮ ವರ್ಗದ ಜನತೆಗೆ ಚಿಕಿತ್ಸೆ ಪಡೆಯುತಕ್ಕಂಥ ಆರ್ಥಿಕ ಸಾಮರ್ಥ್ಯ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಮೂತ್ರ ಪಿಂಡದ ತೊಂದರೆಗೆ ಒಳಗಾಗಿದ್ದ ಒಬ್ಬ ನಾಲ್ಕನೇ ದರ್ಜೆ ವ್ಯಕ್ತಿ ೭೮,೦೦೦ ರೂಪಾಯಿಗಳನ್ನು ಕೊಡಬೇಕಾಗಿ ಬಂತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಇದ್ದರೂ ಕೂಡ ಅದು ಕೆಲಸ ಮಾಡುತ್ತಿಲ್ಲ. ಇತ್ತೀಚೆಗೆ ಹೃದಯ ಬದಲಾವಣೆ ಮಾಡುವಂತ ಸಲಕರಣೆ ನಿಮ್ಮಲ್ಲಿದೆಯೆ? ಇಲ್ಲ. ಅದನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನ ನಡೆದಿರಬಹುದು. ಆದರೆ, ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಬಹಳ ಚಾರ್ಜು ಮಾಡುತ್ತಾರೆ. ಈ ರೋಗಕ್ಕೆ ಕಡ್ಡಾಯವಾಗಿ ಒಂದೇ ಸಮನೆ ಚಿಕಿತ್ಸೆ ಪಡೆಯಬೇಕು, ಇಲ್ಲದೇ ಹೋದರೆ. ರೋಗಕ್ಕೆ ತುತ್ತಾದ ವ್ಯಕ್ತಿ ಸತ್ತು ಹೋಗುತ್ತಾನೆ. ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಬಡವರು ವಿಪರೀತ ಬೆಲೆಗಳನ್ನು ತೆತ್ತು ಚಿಕಿತ್ಸೆ ಪಡೆಯುವುದಕ್ಕೆ ಆಗುತ್ತದೆಯೆ? ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆಗಳಂತ ಸಣ್ಣ ಪುಟ್ಟ ಚಿಕಿತ್ಸೆ ನಡೆಸತಕ್ಕಂಥ ಆಸ್ಪತ್ರೆಗಳು ಎಷ್ಟಿವೆ? ಕೆ ಸಿ. ಜನರಲ್ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡುವಂತ ಸಲಕರಣೆ ಇಲ್ಲ. ಇತ್ತೀಚೆಗೆ ರಾಮಯ್ಯ ಮೆಡಿಕಲ್ ಕಾಲೇಜ್ ನವರು ಟೀಚಿಂಗ್ ಪ್ರಾರಂಭ ಮಾಡಿದ ಮೇಲೆ ಅವರು ಮಾಡಿದ್ದಾರೆ. ಬೌರಿಂಗ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಸಣ್ಣ ಪುಟ್ಟ ಚಿಕಿತ್ಸೆ ಕೊಡತಕ್ಕಂಥ ವ್ಯವಸ್ಥೆ ಇಲ್ಲದಿರುವುದು ದುರ್ದೈವವೆಂದು ಹೇಳಬೇಕಾಗಿದೆ.

ಇದರ ಜೊತೆಗೆ ಆರೋಗ್ಯ ಇಲಾಖೆಯಲ್ಲಿ ಹೇರಳವಾಗಿ ಹಣ ಖರ್ಚು ಮಾಡಲಾಗಿದೆಯೆಂದು ಹೇಳುತ್ತಿದ್ದೀರಿ. ಈ ವರ್ಷ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡದೇ ವಾಪಸ್ಸು ಕೊಟ್ಟಿದ್ದಾರೆ. ಹಣದ ಅವಶ್ಯಕತೆ ಇದ್ದರೂ, ವಾಪಸ್ಸು ಕೊಟ್ಟಿರುವುದಕ್ಕೆ ಅವರಿಗೆ ಶಹಭಾಷಗಿರಿ ಕೊಡುತ್ತೀರೇನು? ಯಾವ ಒಂದು ಇಲಾಖೆಗೆ ಈ ರಾಜ್ಯದ ನಾಗರೀಕರ ಆರೋಗ್ಯವನ್ನು ಕಾಪಾಡತಕ್ಕಂಥ ಜವಾಬ್ದಾರಿ ಕೊಟ್ಟಿದ್ದೀರಿ, ಆ ಒಂದು ಇಲಾಖೆ ಸಮರ್ಪಕವಾಗಿ ಕೆಲಸಮಾಡುತ್ತಿಲ್ಲವೆಂದು ಹೇಳುತ್ತೇನೆ. ಜಯನಗರದಲ್ಲಿ ಕಟ್ಟುತ್ತಿರುವ ಆಸ್ಪತ್ರೆಯನ್ನು ೧೯೭೨ರಲ್ಲಿ ಪ್ರಾರಂಭ ಮಾಡಿದ್ದರೂ ಇನ್ನು ಆಗಿಲ್ಲ. ೬೦೦ ಹಾಸಿಗೆಯುಳ್ಳ ಆಸ್ಪತ್ರೆ, ಇವತ್ತಿಗೂ ಕೆಲಸ ಮಾಡುತ್ತಿಲ್ಲ. ಇದು ಪ್ರಾರಂಭವಾಗಿದ್ದರೆ, ಎಷ್ಟು ಜನಕ್ಕೆ ಅನುಕೂಲವಾಗುತ್ತಿತ್ತು ಎಂಬುದನ್ನು ತಾವು ಯೋಚನೆ ಮಾಡಬೇಕು. ಅಲ್ಲದೆ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿರುವಂತ ಒತ್ತಡವೂ ಕಡಿಮೆಯಾಗುತ್ತಿತು. ಜವಾಬ್ದಾರಿಯನ್ನು ವಹಿಸಿಕೊಂಡಿರುವ ಸರ್ಕಾರ ಯಾವ ದಿಕ್ಕಿನಲ್ಲಿ ಯೋಚನೆ ಮಾಡಿದೆ ಎಂಬುದು ನಮಗೆ ತಿಳಿಯುತ್ತಿಲ್ಲ, ಎಲ್ಲರಿಗೂ ಉಚಿತ ಚಿಕಿತ್ಸೆ ನೀಡುವ ದಿಕ್ಕಿನಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆಯೆ ಎಂದು ನಾನು ಕೇಳುತ್ತೇನೆ. ಮದ್ರಾಸ್ ಮತ್ತು ಮುಂಬಯಿನಂತ ಪಟ್ಟಣಗಳಲ್ಲಿ ಬೀದಿ ದೀಪಗಳಿಗೋಸ್ಕರ ವಿಶ್ವಬ್ಯಾಂಕಿನಿಂದ ಹಣ ತೆಗೆದು ಕೊಂಡುಬರುತ್ತಾರೆ. ಅಲ್ಲಿ ಸೋಡಿಯಂ ವೇಫರು ಲ್ಯಾಂಪುಗಳನ್ನು ಬೀದಿ ದೀಪಗಳಾಗಿ ಹಾಕಿದ್ದಾರೆ. ಲಾರಿಗಳನ್ನು ನಿಲ್ಲಿಸುವುದಕ್ಕೆ. ಸಾರಿಗೆ ವ್ಯವಸ್ಥೆಗೆ, ಕೊಳಚೆ ನಿರ್ಮೂಲನ ಮಾಡುವುದಕ್ಕೆ ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಂಡು ಬರುತ್ತಾರೆ. ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆರೆಯುವುದಕ್ಕೆ. ಅವುಗಳ ಅಭಿವೃದ್ಧಿಗೆ ಯಾವ ಯಾವ ಹಣಕಾಸಿನ ಸಂಸ್ಥೆಗಳಿಂದ ಹಣ ತೆಗೆದುಕೊಂಡಿದ್ದೀರಿ, ಇಂಟರ್ ನ್ಯಾಷನಲ್ ಮಾಸಿಟರಿ ಫಂಡ್‌ನಿಂದ ಐದುವರೆ ಸಾವಿರ ಕೋಟಿ ರೂಪಾಯಿಗಳು ಬರುತ್ತೆ. ಅದರಲ್ಲಿ ರಾಜ್ಯ ಸರ್ಕಾರದ ವತಿಯಿಂದ ಯಾವ ಸ್ಕೀಂ ಬರುತ್ತೆ. ಬರ ತಕ್ಕಂಥ ಪೂರ್ತ ಹಣವೂ ಕೇಂದ್ರಕ್ಕೆ ಹೋಗುತ್ತೆ. ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ. ಅದರಲ್ಲಿ ರಾಜ್ಯ ಸರ್ಕಾರಕ್ಕೆ ಎಷ್ಟು ಪಾಲು ತೆಗೆದುಕೊಳ್ಳಬೇಕೆಂಬ ಬಗ್ಗೆ ಯೋಚನೆ ಏನಾದರೂ ಮಾಡಿದ್ದೀರಾ? ಇದರಲ್ಲಿ ಆರೋಗ್ಯ ಸುಧಾರಣೆಗೆ ಪಾಲು ಪಡೆಯುವ ದಿಕ್ಕಿನಲ್ಲಿ ತಾವು ಯೋಚನೆ ಮಾಡಿದ್ದೀರಾ? ನೀವು ಮಾಡಿಲ್ಲ. ಯುನಿಸೆಫ್‌ನಿಂದ ಬರುತ್ತೆ, ಫುಡ್ ಕೇರ್ ನಿಂದ ಬರುತ್ತೆ, ರಾಜ್ಯದ ಆದಾಯದಲ್ಲಿ ಸ್ವಲ್ಪ ಹಣ ಕೊಟ್ಟು ಕೆಲಸ ನಡೆಸಿಕೊಂಡು ಹೋಗುತ್ತೀರಿ. ನಾಗರೀಕರಿಗೆ ಉಚಿತ ಚಿಕಿತ್ಸೆ ಬಗ್ಗೆ, ಆರೋಗ್ಯದ ಬಗ್ಗೆ, ಒಂದು ದೊಡ್ಡ ಯೋಜನೆ ಹಾಕಿಕೊಂಡು, ಇದಕ್ಕೆ ಎಷ್ಟು ಹಣ ಬೇಕು? ಈ ಹಣವನ್ನು ಯಾವ ಯಾವ ಮೂಲಗಳಿಂದ ತರಬೇಕು? ಈ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಿದೆಯೆ?

ಶ್ರೀ ವೈ. ರಾಮಕೃಷ್ಣ.—ನ್ಯೂರೋಲಾಜಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರದಿಂದ ಮತ್ತಿತರ ದೊಡ್ಡ ದೊಡ್ಡ ಸಂಸ್ಥೆಗಳಿಂದ ಹಣ ಬಂದಿದೆ. ಕೆಲವು ಸಲಕರಣೆಗಳು ಬಂದಿದೆ. ಇದರಲ್ಲಿ ಕೇಂದ್ರ ಸರ್ಕಾರದ ಪೇರು ಕೂಡ ಇದೆ, ಸಾಫಿಸ್ಟಿಕೇಟಡ್ ಮತ್ತು ಸರ್ಜಿಕಲ್ ಇನ್‌ಸ್ಟ್ರುಮೆಂಟ್ ಕೊಡುತ್ತಾರೆ. ರಾಜ್ಯಮಟ್ಟದಲ್ಲಿ ನಡೆಯುವಂತ ಕೆಲಸಗಳಲ್ಲಿ ಕೇಂದ್ರ ಸರ್ಕಾರದ ಪಾಲು ಇದೆ.

ಶ್ರೀ ಪಿ. ರಾಂದೇವ್,—ಇವತ್ತು ರಾಜ್ಯದಲ್ಲಿ ಖಾಸಗೀ ನರ್ಸಿಂಗ್ ಹೋಂಗಳಿಗೆ ಪರೋಕ್ಷವಾಗಿ ಅನುಕೂಲವಾಗುವಂತ ಕೆಲಸಗಳನ್ನು ಸರ್ಕಾರ ಮಾಡುತ್ತಿದೆ. ಕಾರಣ ಖಾಸಗೀ ನರ್ಸಿಂಗ್ ಹೋಂಗಳಲ್ಲಿ ಇವರಿಗೆ ಸಂಬಂಧಪಟ್ಟಂತ ಜನ ಇದ್ದಾರೆ. ಅವರಿಗೆ ಪ್ರೋತ್ಸಾಹ ಕೊಡುವಂತ ಕೆಲಸಗಳು ನಡೆಯುತ್ತಿವೆ. ಒಂದಕ್ಕೆ ಹತ್ತರಷ್ಟು ಹಣ ಸಂಪಾದನೆ ಮಾಡುವ ಕೆಲಸವನ್ನು ಇವುಗಳು ಮಾಡುತ್ತಿವೆ. ಒಂದು ಉದಾಹರಣೆ ಹೇಳುತ್ತೇನೆ, ಹಿರಿಯ ರಾಜಕಾರಣಿ, ೫೦-೪೦ ವರ್ಷಗಳ ಕಾಲ ರಾಜಕೀಯದಲ್ಲಿದ್ದವರು, ಇ.ಜಿ.ಸಿ. ಪರೀಕ್ಷೆಯನ್ನು ಮಾಡಿಸಬೇಕೆಂದು ಜುಬಿಲಿ ನರ್ಸಿಂಗ್ ಹೋಂಗೆ ಹೋದಾಗ, ೨೦೦ ರೂಪಾಯಿಗಳನ್ನು ಕೇಳಿದ್ದಾರೆ. ಅವರ ಹತ್ತಿರ ಹಣ ಇಲ್ಲದೇ ಇದ್ದುದರಿಂದ, ನಮ್ಮ ತಿಮ್ಮೇಗೌಡರ ನರ್ಸಿಂಗ್ ಹೋಂನಲ್ಲಿ ವ್ಯವಸ್ಥೆ ಮಾಡಲಾಯಿತು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ಖಾಸಗೀ ನರ್ಸಿಂಗ್ ಹೋಂಗಳು ಜನತೆಯನ್ನು ಶೋಷಣೆ ಮಾಡುವುದಕ್ಕೆ ಹೊರಟಿವೆ. ಜನತೆಯ ರಕ್ಷಣೆಯನ್ನು ಮಾಡುವುದಕ್ಕೆ ಸರ್ಕಾರ ಮುಂದೆ ಬರಬೇಕು. ತಜ್ಞವೈದ್ಯರು ಎಂದು ಅವರ ಹತ್ತಿರ ಹೋದರೆ, ಖಾಯಿಲೆ ಪರೀಕ್ಷೆ ಮಾಡುವುದಕ್ಕೆ, ೫೦-೧೦೦ ರೂಪಾಯಿಗಳನ್ನು ಕೇಳುತ್ತಾರೆ, ಎಷ್ಟು ಜನಕ್ಕೆ ಹಣ ಕೊಡುವಂತ ಶಕ್ತಿ ಇದೆ? ಚಿಕಿತ್ಸೆಯಂತೂ ಬೇಡ. ಇಂಥ ಒಂದು ವಾತಾವರಣ ಖಾಸಗೀ ನರ್ಸಿಂಗ್ ಹೋಂಗಳಲ್ಲಿ ಇದೆ. ರೋಗಿ ಇರುಮಾಥ ಕೊಠಡಿಗೆ ಡಾಕ್ಟರು ಬರುವುದಕ್ಕೆ ಹತ್ತು ರೂಪಾಯಿ ಕೊಡಬೇಕು. ಇಂಥ ಒಂದು ಶೋಷಣೆಯನ್ನು ತಪ್ಪಿಸಬೇಕೆಂಬ ಖಾಸಗಿ ನರ್ಸಿಂಗ್

ಹೋಂಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಒಂದು ಮಸೂದೆಯನ್ನು ತಂದು ಆದು ಕಾಯಿದೆ ಯಾಯಿತು, ಆದರೆ, ಅದನ್ನು ಜಾರಿಗೆ ತರಲಿಲ್ಲ. ಅದನ್ನು ತೆಗೆದುಕೊಂಡು ಹೋಗಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿರಿ. ನಾನು ಈ ನಿರ್ಣಯವನ್ನು ತರತಕ್ಕಂಥ ಹಿನ್ನೆಲೆಯಾದರೂ, ಖಾಸಗೀ ನರ್ಸಿಂಗ್ ಹೋಂಗಳ ಮೇಲೆ ಸರ್ಕಾರ ತನ್ನ ಹಿಡಿತವನ್ನು ಇಟ್ಟುಕೊಳ್ಳಬೇಕೆಂಬುದೇ ಆಗಿದೆ. ದರ ಗಳನ್ನು ನೀವೇ ಗೊತ್ತು ಮಾಡಿ. ಜನತೆಯ ಶೋಷಣೆಯನ್ನು ತಪ್ಪಿಸಬೇಕಾದರೆ, ಈ ನಿರ್ಣಯವನ್ನು ತಾವು ಒಪ್ಪಲೇಬೇಕು.

ಸ್ವಾಮಿ, ಇವತ್ತು ಕ್ಷಯ ರೋಗ ಜಾಸ್ತಿಯಾಗುತ್ತಿದೆ. ಯುನಿಸೆಫ್‌ನವರು ಒಂದು ಯೋಜನೆ ಯನ್ನು ಹಾಕಿದ್ದಾರೆ. ಕ್ಷಯ ರೋಗದ ಬಗ್ಗೆ ಕ್ಷ-ಕಿರಣ ತೆಗೆದು ಆದರಲ್ಲಿ ಪಾಸಿಟೀವ್ ಇದ್ದರೆ ಚಿಕಿತ್ಸೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದರು, ಆದು ಫೈಲ್ಯೂರ್ ಆಯಿತು. ಈಗ ಆಯೋಜನೆ ಯನ್ನೇ ತೆಗೆದುಬಿಟ್ಟಿದ್ದಾರೆ. ಇತ್ತೀಚೆಗೆ ಕ್ಷಯ ರೋಗದ ಹಾವಳಿ ಜಾಸ್ತಿಯಾಗಿದೆ, ಮಲೇರಿಯಾ ಜಾಸ್ತಿಯಾಗಿದೆ. ತಾವು ಮಲೇರಿಯಾ ರೋಗವು ೧೮೮೬ಕ್ಕೆ ಇಳಿದಿದೆ ಎನ್ನುವ ಮಾತನ್ನು ಹೇಳಿದ್ದೀರಿ. ಇವತ್ತು ಇಡೀ ರಾಜ್ಯದಲ್ಲಿ, ರಾಷ್ಟ್ರದಲ್ಲಿಯೇ ಮಲೇರಿಯಾ ರೋಗ ವ್ಯಾಪಕವಾಗಿ ಹಬ್ಬಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಅಲ್ಲದೆ, ಇತ್ತೀಚೆಗೆ ಮಿದುಳು ಜ್ವರದ ಹರಡುವಿಕೆಯೂ ಜಾಸ್ತಿಯಾಗಿದೆ. ಈ ವರ್ಷದಲ್ಲಿಯೇ ೧೦೦ ಮಕ್ಕಳು ಸತ್ತುಹೋಗಿದ್ದಾರೆ. ಈ ರೋಗ ಜಪಾನ್ ನಿಂದ ಬಂದಿರತಕ್ಕಂಥದ್ದು ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ಮುಂಜಾಗ್ರತೆ ಕ್ರಮವಾಗಿ ಹಂದಿಗಳನ್ನು ಕೊಲ್ಲುತ್ತೇವೆಂದು ಹೇಳಿದ್ದೀರಿ. ಈ ರೋಗವನ್ನು ಸಂಪೂರ್ಣವಾಗಿ ನಿಲ್ಲಿಸು ವುದಕ್ಕೆ, ಮತ್ತೆ ರೋಗಕ್ಕೆ ತುತ್ತಾದ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆ ನೀಡುವುದಕ್ಕೆ ಸರ್ಕಾರ ಪ್ರಾಮಾಣಿಕ ವಾಗಿ ಪ್ರಯತ್ನ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

೧೦-೩೦ ಎ. ಎಂ.

ಅಧ್ಯಕ್ಷರೆ, ಇವೊತ್ತಿನ ದಿವಸ ಮಿದುಳು ಜ್ವರವನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಸಾಕಷ್ಟು ಕಾರ್ಯಕ್ರಮ ಕೈಗೊಂಡಿಲ್ಲ, ಇವೊತ್ತು ಕೋಲಾರದಿಂದ ಬೆಂಗಳೂರಿಗೆ ಹಬ್ಬುತ್ತಿದೆ. ಈ ಕಾಯಿಲೆ ಮಕ್ಕಳಿಂದ ದೊಡ್ಡವರಿಗೂ ತಗಲಿ ರೋಗಕ್ಕೆ ತುತ್ತಾಗಿರುವುದನ್ನು ನಾವು ಕೇಳಿದ್ದೇವೆ. ಈ ಕಾಯಿಲೆ ಯನ್ನು ಪ್ರೋಗೆಸ್ಸೀವ್ ಆಗಿ ಕಂಟ್ರೋಲ್ ಮಾಡಿದ್ದೀರಾ ಎಂದು ನಾನು ಸರ್ಕಾರವನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ತಾವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಕಾಲರ ಹೆಚ್ಚಿರತಕ್ಕ ವಿಚಾರ ತಿಳಿದುಬರುತ್ತದೆ. ಕಾಲರ ರೋಗವನ್ನು ಹತೋಟಿಯಲ್ಲಿಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲವಾದರೆ ತಾವು ಯಾವ ರೀತಿ ಪ್ರಗತಿಯನ್ನು ಸಾಧಿಸುತ್ತೀರಾ ? ಕಾಲರ ರೋಗಕ್ಕೆ ತುತ್ತಾಗಿರುವವರು ಸಾಯಲೇ ಬೇಕಾಗಿದೆ. ಕಾಲರ ರೋಗದ ಮದ್ದು ಇವೊತ್ತು ಉಚಿತವಾಗಿ ಸಿಕ್ಕುತ್ತಿಲ್ಲ, ಅದನ್ನು ಕೊಂಡುಕೊಳ್ಳಲೇ ಬೇಕಾಗಿದೆ. ಸರ್ಕಾರ ತನ್ನ ಜವಾಬ್ದಾರಿಯನ್ನು ಒಪ್ಪಿಕೊಂಡು, ನೀತಿಯನ್ನು ಪ್ರತಿಪಾದನೆ ಮಾಡಿ ಆದನ್ನು ಪಾಲನೆ ಮಾಡತಕ್ಕ ಗುರಿ ಸರ್ಕಾರಕ್ಕೆ ಇಲ್ಲ ಎನ್ನುವುದನ್ನು ನಾನು ಬಹಳ ದುಃಖದಿಂದ ಹೇಳ ಬೇಕಾಗಿದೆ. ಇನ್ನು ನಮ್ಮ ರಾಜ್ಯದಲ್ಲಿ ಪುಲ್ ಫ್ಲಡ್ಜ್‌ಡ್ ಡಾಕ್ಟರ್ ಸಿಕ್ಕುತ್ತಿಲ್ಲ ಎನ್ನುವ ವಿಚಾರ ಇದೆ.

ಶ್ರೀ ವೈ. ರಾಮಕೃಷ್ಣ.—ನಮ್ಮ ರಾಜ್ಯದಲ್ಲಿ ಸಾಕಷ್ಟು ಜನ ಫುಲ್ ಫ್ಲಡ್ಜ್‌ಡ್ ಡಾಕ್ಟರುಗಳು ಸಿಕ್ಕುತ್ತಾರೆ.

ಶ್ರೀ ಪಿ. ರಾಂದೇವ್.—ಆದು ಸಾಲದು ಈವೊತ್ತು ಅಸಮರ್ಪಕವಾದಂಥ ವೈದ್ಯಕೀಯ ಚಿಕಿತ್ಸೆ ಯನ್ನು ತಾವು ಒದಗಿಸಿರುವುದರಿಂದ, ಜನತೆ ದೇವಸ್ಥಾನಗಳಲ್ಲಿ ಹೋಗಿ ದೇವರಿಗೆ ಪೂಜೆ ಮಾಡಿಸಿ, ನಮ್ಮ ಕಾಯಿಲೆ ವಾಸಿ ಮಾಡಪ್ಪ ಎಂದು ಕೇಳಿಕೊಳ್ಳುವಂಥ ಪರಿಸ್ಥಿತಿಗೆ ತಾವು ತಂದಿಟ್ಟಿದ್ದೀರಿ, ಇದು ಸರಿಯಲ್ಲ. ಇನ್ನು ಡ್ರಗ್ಸ್ ಬೆಲೆಗಳ ವಿಚಾರವನ್ನು ಹೇಳಬೇಕೆಂದರೆ ಮಿಡಲ್‌ಕ್ಲಾಸ್ ಜನರನ್ನು ಬಿಡಿ, ಅಪ್ಪರ್ ಮಿಡಲ್ ಕ್ಲಾಸ್ ಜನರೂ ಕೂಡ ಡ್ರಗ್ಸ್ ಕೊಂಡುಕೊಳ್ಳುವ ಪರಿಸ್ಥಿತಿ ಇದೆ. ಡ್ರಗ್ಸ್ ಬೆಲೆಗಳ ವಿಚಾರದಲ್ಲಿ ಸರ್ಕಾರ ಹತೋಟಿ ಇಡತಕ್ಕ ವ್ಯವಸ್ಥೆಯಾಗಿಲ್ಲ. ರೋಗ ನಿರೋಧಕ ಚುಚ್ಚು ಮದ್ದುಗಳ ಮೇಲೆ ಬೆಲೆ ಹತೋಟಿ ಇಟ್ಟಿಲ್ಲ. ಕೆಲವೊಂದು ಔಷಧಿಗಳನ್ನು ಕಾಳಸಂತೆಯಲ್ಲಿ ಕೊಂಡುಕೊಳ್ಳಬೇಕಾಗಿದೆ. ಡಯಾಬಿಟಿಕ್ ರೋಗಿಗಳಿಗೆ ಅವಶ್ಯಕವಾದಂಥಾದ್ದು ಸಿಕ್ಕುತ್ತಿಲ್ಲ. ಇಂತಹ ಡ್ರಗ್ಸ್ ಮೇಲೆ ಸರ್ಕಾರ ಏನು ಹತೋಟಿ ಇಟ್ಟಿದೆ, ಚಿಕಿತ್ಸೆಗೆ ಬೇಕಾಗಿರತಕ್ಕ ಡ್ರಗ್ಸ್ ತಯಾರು ಮಾಡಿಸತಕ್ಕ ಪ್ರಯತ್ನವನ್ನು

ಸರ್ಕಾರ ಮಾಡಿದಿಯೇ ? ಬಡವ ಔಷಧಿ ಕೊಂಡುಕೊಳ್ಳಲಿಕ್ಕೆ ಬೆಲೆ ಹತೋಟಿಯಲ್ಲಿ ಏನು ಕ್ರಮ ಕೈಗೊಂಡಿದ್ದೀರಾ ? ಇವೆಲ್ಲವುಗಳ ವಿವರವನ್ನು ಮಾನ್ಯ ಮಂತ್ರಿಗಳು ಕೊಡಬೇಕಾಗಿತ್ತು. ಇನ್ನು ಮಕ್ಕಳ ನ್ಯೂಟ್ರಿಷನ್ ಪ್ರೋಗ್ರಾಂ ಬಗ್ಗೆ ಹೇಳಬೇಕೆಂದರೆ, ತಾವು ಕೊಟ್ಟ ರತಕ್ಕ ಅಂಕಿಸಂಖ್ಯೆಗಳನ್ನು ನೋಡಿದರೆ ೧೦-೧೭ ಲಕ್ಷ ಎಂದು ಹೇಳಿದ್ದೀರಿ. ಇವೊತ್ತು ತಾವು ೧೭ ಲಕ್ಷ ಮಕ್ಕಳಿಗೆ ನ್ಯೂಟ್ರಿಷನ್ ಫುಡ್ ಕೊಟ್ಟರೆ ಸಾಕೆ ? ಇತರ ಮಕ್ಕಳಿಗೆ ನ್ಯೂಟ್ರಿಷನ್ ಫುಡ್ ಕೊಡುವ ವ್ಯವಸ್ಥೆ ಬೇಡವೇ ? ಇನ್ನು ೫ ವರ್ಷಗಳಲ್ಲಿ ಎಲ್ಲಾ ಶಾಲಾ ಮಕ್ಕಳಿಗೂ ನ್ಯೂಟ್ರಿಷನ್ ಫುಡ್ ಕೊಡುವಂಥ ಯೋಜನೆ ಏನಾದರೂ ಸರ್ಕಾರದಲ್ಲಿ ಇದೆಯೇ ? ಹಿಂದೆ ಬ್ರಿಟಿಷ್ ಸರ್ಕಾರ ಹೇಗೆ ನಡೆದುಕೊಂಡುಬಂದಿದೆ ಅದೇ ರೀತಿ ನಡೆದು ಕೊಂಡು ಬರುತ್ತಿದೆಯೇ ಹೊರತು, ತಮ್ಮ ಸ್ವಪ್ರಯತ್ನದಿಂದ ಒಂದು ಶ್ರದ್ಧೆ ತತ್ವದ ಹಿನ್ನೆಲೆಯಲ್ಲಿ ಎಲ್ಲಾ ಚಿಕಿತ್ಸೆಗಳಿಗೂ ವೈದ್ಯಕೀಯ ಸೌಲಭ್ಯ ಕೊಡತಕ್ಕ ಪ್ರಯತ್ನವನ್ನು ಸರ್ಕಾರ ಮಾಡುತ್ತಿಲ್ಲ. ಇವೊತ್ತು ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಇಷ್ಟೆ, ಇನ್‌ಷ್ಯೂರೆನ್ಸ್ ಸ್ಕೀಮ್ ಅಥವಾ ಹೆಲ್ತ್ ಸ್ಕೀಮ್ ಯಾವುದಾದರೂ ಒಂದು ಸ್ಕೀಮನ್ನು ಜಾರಿಗೆ ತನ್ನಿ. ಇ.ಎಸ್ ಐ. ವರ್ಕರ್ಸ್‌ಗೆ ಮಾತ್ರ ಸೀಮಿತ ಆಗಿದೆ. ಅದೇ ರೀತಿ ನಮ್ಮ ರಾಜ್ಯದ ಎಲ್ಲಾ ಜನತೆಯನ್ನು ಅಳವಡಿಸುತಕ್ಕ ಒಂದು ಯೋಜನೆ ಯನ್ನು ಜಾರಿಗೆ ತನ್ನಿ. ವರ್ಷೇ ವರ್ಷೇ ಇಷ್ಟು ಜನರಿಗೆ ಉಚಿತ ಚಿಕಿತ್ಸೆ ಕೊಡುತ್ತೇವೆಂದು ಹೇಳಿ ಇಲ್ಲದೇ ಹೋದರೆ ಬ್ರಿಟನ್ ಮಾದರಿ ಇನ್‌ಷ್ಯೂರೆನ್ಸ್ ಸ್ಕೀಮ್ ತೆಗೆದುಕೊಂಡು ಬನ್ನಿ. ಮುಂದೆ ಯಾವುದೇ ಸರ್ಕಾರ ಬರಲಿ, ತಾವು ತರತಕ್ಕಂಥ ಒಂದು ಸ್ಕೀಮ್‌ಗೆ ಬದ್ಧವಾಗಿರಬೇಕು, ಉಚಿತ ವೈದ್ಯ ಕೀಯ ಸೌಲಭ್ಯ ಕೊಡಬೇಕು ಎನ್ನುವುದನ್ನು ತಾವು ಒಪ್ಪಿಕೊಳ್ಳಬೇಕು. ಈ ವಿಚಾರದಲ್ಲಿ ಪ್ರತಿಷ್ಠೆ ಮೇಲೆ ನಿಲ್ಲಬೇಕಾದಂಥ ಪ್ರಮೇಯವಿಲ್ಲ. ಕಡಿಯುವ ನೀರಿನ ವಿಚಾರದ ಬಗ್ಗೆ, ಚಿಕಿತ್ಸೆ ಸೌಲಭ್ಯ ಒದಗಿಸುವ ಬಗ್ಗೆ ಪ್ರತಿಷ್ಠೆ ಬೇಕಾಗಿಲ್ಲ. ಈ ಒಂದು ಖಾಸಗಿ ನಿರ್ಣಯಕ್ಕೆಸರ್ಕಾರ ಹೆದರಬೇಕಾಗಿಲ್ಲ ಸರ್ಕಾರ ದೊಡ್ಡ ಮನಸ್ಸು ಮಾಡಿ ಈ ಒಂದು ನಿರ್ಣಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳು ಪರಿ ಶೀಲನೆಗೆ ಯೋಗ್ಯವಾದವುಗಳಾಗಿವೆ. ಅವುಗಳನ್ನು ಪರಿಶೀಲನೆಗೆ ಮಾಡುತ್ತೇನೆ. Principally I have agreed. I request the Hon'ble Member to with-draw the Resolution. I would consider it.

ಶ್ರೀ ಪಿ. ರಾಂದೇವ್. –ಅಧ್ಯಕ್ಷರೆ, ಇದು ಜನತೆಗೆ ಅನುಕೂಲವಾಗಬೇಕಾದಂಥ ವಿಚಾರ. ಮಾನ್ಯ ಮಂತ್ರಿಗಳು ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ನಾನು ಪ್ರತಿಷ್ಠೆ ಮೇಲೆ ನಿಲ್ಲುವುದಿಲ್ಲ. ಈ ಬಜೆಟ್‌ನಲ್ಲಿ ಈ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಪಿ. ರಾಂದೇವ್.—ಪರಿಶೀಲನೆ ಅಂದರೆ ಎಷ್ಟು ವರ್ಷ ? ನಾನು ಇವೊತ್ತೇ ಮಾಡಬೇಕೆಂದು ಹೇಳುತ್ತಿಲ್ಲ.....

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಬಡ್ಜೆಟ್ ಹೊತ್ತಿಗೆ ಒಂದು ಅಭಿಪ್ರಾಯಕ್ಕೆ ಬರಬಹುದು.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಪಾಶ್ಚಿಮಾತ್ಯ ದೇಶದಲ್ಲಿರುವಂತೆ, ನಮ್ಮ ರಾಜ್ಯದಲ್ಲಿ ಜಾರಿಗೆ ತರಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದಕ್ಕೆ ಕಾಲಾವಧಿ ವಿಚಾರ ಬೇಡ. ಪರಿಶೀಲ ನೆಗೆ ಯೋಗ್ಯವಾಗಿದೆ ಅದನ್ನು ನಾನು ಖಂಡಿತ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಂಥ ಭರವಸೆಯ ಮೇಲೆ ನಾನು ಮಂಡಿಸಿದ್ದಂಥ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

MR. SPEAKER.—Has the hon. member the Permission of the House to with draw the resoulution ?

HON. MEMBERS.—Yes.

(The Resolution was by leave of the House, withdrawn.)

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಹೆಚ್. ಗಂಗಾಧರನ್ ಅವರು ತಮ್ಮ ನಿರ್ಣಯವನ್ನು ಸಭೆಯಲ್ಲಿ ಮಂಡಿಸಬಹುದು ಈ ಒಂದು ನಿರ್ಣಯಕ್ಕೆ ಒಂದೂವರೆ ಗಂಟೆ ಕಾಲಮಿತಿಯನ್ನು ನಿಗದಿ ಮಾಡಲಾಗಿದೆ.

(*ii*) Re : *Establishment of a Sanskrit University.*

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೆ, ಜಗತ್ತಿನಲ್ಲಿ ಕೀರ್ತಿ ಪಡೆದಿರತಕ್ಕಂಥ, ಈ ರಾಷ್ಟ್ರದ ಘನತೆಗೌರವಗಳನ್ನು ಸಂರಕ್ಷಿಸುವುದಕ್ಕಾಗಿ ಆತ್ಮಾರ್ಪಣೆ ಮಾಡಿದಂಥ, ಮಹಾನುಭಾವರು ಸರ್ವೋದಯದ ದಿನದಂದು ಈ ಒಂದು ಪವಿತ್ರವಾದಂಥ ನಿರ್ಣಯವನ್ನು ಮಂಡಿಸುವುದಕ್ಕೆ ಅತ್ಯಂತ ಸಂತೋಷಪಡುತ್ತೇನೆ. ನನ್ನ ನಿರ್ಣಯ ಈ ರೀತಿ ಇದೆ.

> "ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ, ೧೯೮೨ನೇ ಇಸವಿಯಿಂದಲೇ ಕಾರ್ಯೋನ್ಮುಖವನ್ನಾಗಿ ಮಾಡಬೇಕೆಂದು ಈ ಸರಕಾರದವರನ್ನು ಒತ್ತಾಯಪಡಿಸುತ್ತದೆ."

(ಪ್ರಶ್ನೆಯನ್ನು ಸಭೆಯು ಮುಂದಿಡಲಾಯಿತು)

ಶ್ರೀ ಹೆಚ್. ಗಂಗಾಧರನ್.—ಅಧ್ಯಕ್ಷರೆ, ಈ ರಾಜ್ಯದಲ್ಲಿ ಸಂಸ್ಕೃತ ಶಿಕ್ಷಣಕ್ಕಾಗಿ ಒಂದು ಪ್ರತ್ಯೇಕವಾದಂಥ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬ ಮಾತನ್ನು ನಾನು ಅನೇಕ ಸಾರಿ ಭಿನ್ನವಿಸಿಕೊಂಡಿದ್ದೇನೆ. ಈ ಒಂದು ನಿರ್ಣಯ ಎರಡನೇ ಸಾರಿ ಸಭೆಯ ಮುಂದೆ ಬರುತ್ತಿದೆ. ಆದರೆ ಮೊದಲನೆ ಅವಕಾಶ ಸಿಕ್ಕದೇ ಇದ್ದು ಇಂತಹ ಒಂದು ಪವಿತ್ರವಾದ ದಿನದಲ್ಲಿ ಅವಕಾಶ ಸಿಕ್ಕಿದ್ದು ಈ ರಾಜ್ಯದ ಸುಯೋಗ ಎಂದು ಭಾವಿಸಿ ಈ ನಿರ್ಣಯದ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಮೈಸೂರು ನಗರದಲ್ಲಿ ಈ ರಾಜ್ಯದ ಮಂತ್ರಿ ಮಂಡಲದ ಸಭೆಯಾದಾಗ, ಮೈಸೂರು ನಗರದಲ್ಲಿ ಸಂಸ್ಕೃತ ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬುದಾಗಿ ನಾನು ಮುಖ್ಯ ಮಂತ್ರಿಗಳಲ್ಲಿ ನಿವೇದಿಸಿಕೊಂಡಿದ್ದೇನೆ. ಅವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳುಕೂಡ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ಈ ರಾಜ್ಯದ ಯಾವುದೇ ವ್ಯಕ್ತಿ ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆಯ ಬಗ್ಗೆ ವಿರೋಧವನ್ನು ಮಾಡಲಾರರು ಎಂಬ ಭರವಸೆಯನ್ನುಳ್ಳವನಾಗಿದ್ದೇನೆ. ಈ ರೀತಿ ಇರುವುದರಿಂದ ಸಂಸ್ಕೃತ ಭಾಷೆಯ ಬಗ್ಗೆ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದು ಅವಶ್ಯಕ ಎಂದು ನನ್ನ ಭಾವನೆ. ಜಗತ್‌ಪ್ರಸಿದ್ಧಿಯಾದಂತ ಸಂಸ್ಕೃತದ ಇತಿಹಾಸವನ್ನು ಬರೆದು ಮಹಾನ್‌ವ್ಯಕ್ತಿ ಎನಿಸಿಕೊಂಡಿರುವ ವಿಲ್ ಡ್ಯೂರೆಂಟ್ ಅವರು "The History of the Civilisation of the world" ಎಂಬ ಪುಸ್ತಕದಲ್ಲಿ "India is mother of us all" ಎಂದು ಬರೆದಿದ್ದಾರೆ. ಸುಮಾರು ೧೫-೨೦ ಸಂಪುಟಗಳನ್ನು ಬರೆದಂಥ ಮಹಾನ್‌ವ್ಯಕ್ತಿ ಭಾರತ ನಮ್ಮೆಲ್ಲರ ತಾಯಿ ಎಂದು ಹೇಳಿದ್ದಾರೆ. ಏಕೆಂದರೆ ಇಲ್ಲಿರತಕ್ಕಂತ ಸಂಸ್ಕೃತಿ, ಇಲ್ಲಿರತಕ್ಕಂಥ ಸಂಸ್ಕೃತ ಭಾಷೆ ಈ ದೇಶದ ಜನಜೀವನ, ಇವೆಲ್ಲವನ್ನು ಗಮನಿಸಿದಾಗ ಭಾರತ ಜಗತ್ತಿನ ತಾಯಿ ಎನ್ನುವ ಮಾತನ್ನು ಹೇಳುತ್ತಾ, ಭಾರತದ ಸಂಸ್ಕೃತ ಭಾಷೆ ಜಗತ್ತಿನ ಎಲ್ಲಾ ಭಾಷೆಗಳ ತಾಯಿ ಎನ್ನುವ ಮಾತನ್ನು ಅವರು ವ್ಯಕ್ತಪಡಿಸಿದ್ದಾರೆ. ಇಂಥ ಇತಿಹಾಸ ತಜ್ಞರು ಹೇಳುವಂಥ ಮಾತನ್ನು ಗಮನಿಸುವಾಗ ಇದೇ ಮಾತನ್ನು ಅನುಸರಿಸಿ ಭಾರತಕ್ಕೆ ಸಿಕ್ಕಿರತಕ್ಕ ಗೌರವ ಮತ್ತು ಇದಕ್ಕೆ ನಿಲುಕಬೇಕಾದಂಥ ಸ್ಥಾನಮಾನಗಳು ಯಾವುದರ ಆಧಾರದ ಮೇಲೆ ಎಂದು, ಜಗತ್ತಿನ ಇತಿಹಾಸವನ್ನು ಬರೆದಂಥ 'ದಿ ಸ್ಟೋರೀಸ್ ಆಫ್ ಹಿಸ್ಟರಿ'— ಬರೆದಂಥ ಟಾಯಿಂಬಿ ಎನ್ನುವವರು ಭಾರತದ ಇತಿಹಾಸವನ್ನು ಕುರಿತು ಒಂದು ಸಂಪುಟದಲ್ಲಿ ಬರೆಯುತ್ತ "ಭಾರತದ ಘನತೆ ಗೌರವಗಳನ್ನು ರಕ್ಷಣೆ ಮಾಡತಕ್ಕಂಥ ಒಂದು ಸಂಪತ್ತು ಏನಾದರೂ ಭಾರತಕ್ಕೆ ಇರುವುದಾದರೆ, ಈ ದೇಶದ ಭೌತಿಕ ಸಂಪತ್ತಲ್ಲ, ಈ ದೇಶದಲ್ಲಿ ಬೆಳೆಯತಕ್ಕ ಯಾವುದೇ ಒಂದು ನಾಗರೀಕತೆ ಅಲ್ಲ, ಈ ದೇಶಕ್ಕೆ ಇರತಕ್ಕ ಸಂಸ್ಕೃತ ಭಾಷೆ ಒಂದು ಕೊಡುಗೆ ಎನ್ನತಕ್ಕ ಮಾತನ್ನು ಟಾಯಂಬಿ ವ್ಯಕ್ತಪಡಿಸಿದ್ದಾರೆ. ಅನೇಕ ಮಹಾನುಭಾವರು ವ್ಯಕ್ತಪಡಿಸಿರತಕ್ಕ ಅಭಿಮಾನವನ್ನು ಸೂಚಿಸತಕ್ಕ ಈ ಭಾಷೆ, ಇದಕ್ಕಾಗಿ ನಿರ್ದಿಷ್ಟವಾಗಿ ಒಂದು ವಿಶ್ವವಿದ್ಯಾನಿಲಯವನ್ನು ಕರ್ನಾಟಕದಲ್ಲಿ ಸ್ಥಾಪನೆ ಮಾಡುವುದು ಕನ್ನಡದ ಜನತೆಗೆ ಗೌರವ ಸೂಚಿಸುವ ಕಾರ್ಯ, ಕನ್ನಡ ಜನ